(SRI CHOWDA REDDY)

(*b*) the action taken by Government in eradicating the bad effects on education in view of all pervasive corruption prevailing in distribution of "Care" food ?

Sri A. R. BADARINARAYANA (Minister for Education).—

(*a*) No.

(*b*) Suitable disciplinary action will be taken wherever misuse of food articles are noticed.

Madam SPEAKER.—Now question hour is over.

CALLING ATTENTION TO A MATTER OF URGENT PUBLIC IMPORTANCE:

re : *Disturbances at Munireddypalya during October* 1972

Sri T. R. SHAMANNA (Fort).—I call the attention of the Chief Minister to the disturbances at Munireddypalya during the last month.

Sri D. DEVARAJ URS (Chief Minister).—I state as follows :

It is reported that on 17th October 1972, the people of Munireddy Palya in Bangalore had proposed to take out annual customary Dasara procession. As usual, decorated chariots carrying deities with electrical illuminations assembled at about 6-30 P.M. in the open maidan at Munireddy Palya. After performing pooja, the procession accompanied by music started at about 9-30 P.M. At about 10-10 P.M. when the procession approached a Mosque on the main road, objection was raised to the playing of music in front of the Mosque. The Police on the spot intervened and tried to convince the people that the law on the subject permitted taking out procession in the public streets to the accompaniment of music. But the advice of the police was not heeded and the procession was not allowed to proceed further. Some mischievous elements started pelting stones on the procession from the mosque and the side lanes and also freely used soda bottles. The police resorted to lathi charge and fired tear gas shells to chase away the mob. In the melee, one Armed Reserve Police Constable was stabbed in the back, and later he died. Another Police Constable was also assaulted on the back of his neck. A section of the mob continued to pelt stones, chappals, water cans, zinc sheets, iron gate, etc., from inside the mosque on the police, the crowd and deities. Another section unsuccessfully attempted to set fire to a few shops. However, one cracker shop

and two vegetable and provision shops were set on fire. Some auto-rickshaws and motor cycles were also damaged. The Fire Force and Police brought the fire under control.

The rioting mob continued to assemble in various places and attacked the police with stones and other missiles. The mob was dispersed and the situation was brought under control by about mid-night. In all, 20 tear gas shells and two hand grainades were burst. In addition to the Armed Reserve Police Constable who died as a result of a stab injury, two dead bodies were found, one near the A. K. Colony and the other (a completely charred body) in the cracker shop which was gutted on the night of 17th October 1972. Eight persons were admitted to the hospital and eight persons were treated as out-patients. 20 police officers and men sustained injuries due to stone hits.

Prohibitory orders under Section 35 of the Mysore Police Act were promulgated for a period of 15 days from 18th October 1972.

The situation was peaceful on 18th October 1972 except for a stray incident at 10.00 A.M. when a breadvendor aged about 21 years was assaulted by some miscreants. There was an attempt to set fire to his cycle and the bag containing bread. The tyres and tubes of the cycle were partly damaged. On arrival of the police, the miscreants ran away. On the evening of 18th October 1972, the Commissioner of Police met the leaders of both communities at Munireddy Palya and advised them to help in restoration of peace. Peace Committee meetings were also held and an agreement was reached in regard to the taking out of procession in front of the mosque peacefully.

On 19th October 1972, no incidents were reported till late in the evening. At about 8.00 P.M. a crowd stoned some houses in Matadahalli, a predominently Hindu village. The local police promptly intervened and dispersed the mob. At about 9.10 P.M. a few teenagers pelted stones on the houses in Gangenahalli village, The police rushed to the spot and chased away the miscreants. No damage was reported in the above two incidents. At about 10.00 P.M. a complaint was received in the Police Station regarding the missing of a person who had left his house in the morning on that day. However, the dead body of the missing person is reported to have been found in a deserted house. The Police have registered a case under Sections 448, 302, IPC and the same is under investigation.

As a sequel to the incidents at Munireddy Palya, disturbances took place in the industrial suburbs near the Indian Telephone Industries, H.A.L. and K.R. Puram and also in the surrounding villages of Munireddy Palya.

On 20th October 1972, at about 12-30 P.M. when a group of workers of the Indian Telephone Industries had gathered behind the

(SRI D. DEVARAJ URS)

test House for offering prayers, another group of workers disturbed e prayers. As this resulted in an altercation, the police intervened. s the crowd surrounded the Sub-Inspector and attempted to snatch way his revolver, he fired two rounds in self-defence and also to prevent mob attack. One person who received injury was treated in the Hospital. At the main gate of the Factory, the crowd attacked some buses and caused damage to fruit stalls and attempted to ransack a godown. As the situation was likely to go out of control, the Police Constable fired one round with his musket. No person was injured as a result of firing. In these incidents, 17 persons sustained minor injuries and they were treated as outpatients in the Hospital.

The crowd also tried to attack a Gear Manufacturing Factory at Krishnarajapuram and pelted stones. One Godown was stoned. The crowd then assembled near Krishnarajapuram Railway Station, but it was dispersed by the police.

On 21st October 1972, at about 2-15 P.M. 4,000 workers of Indian Telephone Industries, after the first shift, came out and collected in front of the Factory and blocked the road. The mob contended that in Kothur Village situated near the I.T.I. Factory, large quantities of weapons and missiles had been stored in a place of worship. The senior Police Officers assured the crowd that no weapons or missiles had been stored as suspected. By 5.30 P.M. the strength of the crowd swelled to 8,000 and some of workers armed with sticks proceeded in the direction of Kothur village and attempted to attack petty shops. The Police had to disperse the mob by restorting to lathi charge and using tear gas shells. Although the workers persisted in pelting stones at the police, the situation was brought under control. In this incident, three persons were injured. The Indian Telephone Industries did not function after 5.30 P.M.

Earlier, at about 2.45 P.M. some Factory workers and others pelted stones in Kothur Village. An attempt to raid a place of workship was foiled by the Police after making lathi charge and using tear gas shells. The mob however looted two petty shops in the out skirts of the villge. The police arrested seven miscreants on the spot and recovered the looted property. On old Madras Road, some incidents of pelting stones at passing vehicles were reported. The police chased away the crowd. The mob re-grouped in large numbers near K.R. Puram Railway Station and indulged in acts of violence.

In Bharath Earth Movers Limited, workers went on tool down strike demanding the removal of certain employees in the Canteen. A false rumour was spread in the factory that the Canteen Manager was arrested in connection with a murder case and this created some tension in the factory. In other parts of Bangalore City, some stray

incidents of assault and pelting of stones at passing vehicles and shops were reported.

On 22nd October 1972, at about 9.00 P.M., some miscreants pelted stones and set fire to a pendal constructed for offering prayers. Four persons were injured as a result of pelting of stones. Stray incidents of assault and pelting of stones at vehicles were reported in other parts of the City also.

On 23rd and 24th October 1972, a few incidents of assault and mischief by fire were reported. From 25th October 1972 onwards no incidents have taken place and the situation is peaceful.

As a result of the disturbances at Munireddy Palya and other places, four persons including one Police Constable lost their lives. Eighty-nine persons sustained injuries. The extent of total damage to property is still being assessed. But according to the information furnished to the Police it is about Rs. 2,23,056. The police have registered 98 cases in connection with these disturbances and 403 persons were arrested. Two cases are pending trial, 73 cases are under investigation and the remaining 23 cases have been otherwise disposed of.

The maintenance of peace and tranquillity is undoubtedly the primary responsibility of the State. But to achieve this, public co-operation is a vital necessity. Every attempt was made therefore during these incidents to build up public support for the maintenance of law and order and for bringing about revival of goodwill between the communities concerned. I had called a meeting of leading citizens of Bangalore including Member of the Legislatures, Corporation Councillors and other leaders of the communities concerned. The situation was explained to them and appreciation was expressed by those present of the manner in which the Police had handled the situation. It was unanimously decided to set up a Central Peace Committee in Bangalore under the Chairmanship of His Worshipful Mayor of Bangalore. The Committee has been set up and is functioning and I hope that it will work on a continuous basis not merely to deal with situations when they arise, but also to take preventive steps well in advance.

So far as Munireddy Palya itself is concerned, a local Peace Committee was established with leading local citizens of both communities. The Peace Committee had several discussions and also met me on more than one occasion. Leaders of both communities felt that what had transpired was not desirable and peace should be restored. Accordingly it was agreed that the Dasara procession which was disturbed on the 17th of October should be reheld on 28th October 1972 with the full participation of both the communities. The Peace Committee invited me to attend the procession and I did so. I am glad to inform the House that the re-held procession went

(SRI D. DEVARAJ URS)

off very peacefully and has helped to restore a measure of confidence and amity in the area.

The situation which we faced in Bangalore in the second half of October was a very critical one and the circumstances in which incidents occured could have created a major disturbance to the peace of the city, as has occured in several other towns in India. The House will appreciate that through co-ordinated action at all levels the situation was effectively brought under control. I would not hesitate to state that the Police acted with fairness and effectiveness and it has won the appreciations of the public.

The expenditure incurred by the Police Department in maintaining law and order in Bangalore during this period is roughly estimated at Rs. eight lakhs.

ಶ್ರೀ ಟಿ. ಆರ್. ಶಾಮಣ್ಣ.—ಈ ಘಟನೆ ನಡೆದು ನಾಲ್ಕು ನಿರ್ದೋಷಿಗಳ ಜೀವ ಹೋಯಿತು. 89 ಜನರಿಗೆ ಗಾಯವಾಯಿತು, ಎರಡು ಲಕ್ಷ ರೂಪಾಯಿಯಷ್ಟು ಸಾರ್ವಜನಿಕರ ಆಸ್ತಿಪಾಸ್ತಿಗೆ ನಷ್ಟವಾಯಿತು, ಮತ್ತು ಸರ್ಕಾರಕ್ಕೆ ಸುಮಾರು 8 ಲಕ್ಷ ರೂಪಾಯಿ ಖರ್ಚು ಆಯಿತು. ಕೊನೆಯಲ್ಲಿ ಪೋಲೀಸರು ಸಾಕಷ್ಟು ಎಚ್ಚರಿಕೆ ವಹಿಸಿ ಕೆಲಸ ಮಾಡಿರುವುದು ಸಂತೋಷದ ವಿಚಾರ. ಆದರೆ 17ನೇ ತಾರೀಕಿನಂದು ಪೋಲೀಸರು ಸಾಕಾದಷ್ಟು ಎಚ್ಚರಿಕೆ ವಹಿಸದಿದ್ದ ಕಾರಣ ಈ ಘಟನೆ ನಡೆದುದು ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಕೊಳ್ಳುತ್ತಾರೆಯೇ ?

ಶ್ರೀ ಡಿ ದೇವೆರಾಜ ಅರಸ್.—ಇಲ್ಲ. ನಾನು ಆ ಮಾತನ್ನು ಡಿಫೇಡ್ ಮಾಡುವುದಕ್ಕೆ ಏನೂ ಹೇಳುತ್ತಿಲ್ಲ. ಅಲ್ಲಿ ಸಾಕಷ್ಟು ಪೋಲೀಸ್ ಬಂದೋಬಸ್ತು ಇತ್ತು. ನಾನು ಆ ಮೇಲೆ ಆ ಸ್ಥಳದಲ್ಲಿದ್ದಂತಹ ಜನರನ್ನು ಮತ್ತು ಅದರಲ್ಲಿ ಭಾಗವಹಿಸಿದಂತಹ ಜನರ ಮುಖಂಡರನ್ನು ಕರೆದು ಕೇಳಿದಾಗ ಪೋಲೀಸ್ ಬಂದೋಬಸ್ತು ಸಾಕಷ್ಟು ಇಲ್ಲದೆ ಹೋಗಿದ್ದರೆ ಅಲ್ಲಿ ಬಹಳ ಅನಾಹುತ ವಾಗುತ್ತಿತ್ತು ಎಂದು ಹೇಳಿದ್ದಾರೆ, ಮತ್ತು ಪೋಲೀಸ್ ಬಂದೋಬಸ್ತು ಸಾಕಷ್ಟು ಇತ್ತು ಎಂಬುದನ್ನು ಒಪ್ಪಿಕೊಂಡಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಈ ಮತೀಯ ಗಲಭೆಗಳು ಸಾಧಾರಣವಾಗಿ ಮುನ್ಸೀದಿಯ ಮುಂದೆ ಮೆರವಣಿಗೆಗಳು ಹೋಗುವಾಗ ನಡೆಯುತ್ತಿವೆ. ಇದರ ಬಗ್ಗೆ ಕೋರ್ಟಿನಲ್ಲಿಯೂ ತೀರ್ಮಾನವಾಗಿದೆ. ಆದ್ದರಿಂದ ಇಂತಹ ಗಲಭೆಗಳನ್ನು ತಪ್ಪಿಸಲು ಎರಡು ಕೋಮಿನ ಮುಖಂಡರುಗಳನ್ನು ಕರೆಸಿ ಪ್ರಾತನಾಡಿ ಯಾವುದಾದರೂ ಒಂದು ನ್ಯಾಯವಾದ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮುಖ್ಯಮಂತ್ರಿಯವರು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಇದರ ಬಗ್ಗೆ ಕೋರ್ಟಿನಲ್ಲಿಯೂ ತೀರ್ಮಾನವಾಗಿದೆ. ಕಾನೂನಿನಂತೆ ನಾವು ನಡೆಕೊಳ್ಳಬೇಕಾಗುತ್ತದೆ. ಕಾನೂನು ಎಲ್ಲರಿಗೂ ಅನ್ವಯಿಸಬೇಕಾಗುತ್ತದೆ. ಅದರಂತೆ ರಕ್ಷಣೆ ಕೊಡುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಕಾನೂನಿಗೆ ಎಲ್ಲರೂ ಬದ್ಧರಾಗಿದ್ದೇವೆ. ಕಾನೂನಿನಂತೆ ಎಲ್ಲರೂ ನಡೆಯಬೇಕು. ಇದಕ್ಕಿಂತ ಹೆಚ್ಚು ಏನು ಮಾಡಬೇಕು ಹೇಳಿ ಅದನ್ನು ನಾನು ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಕಾನೂನು ತಿಳಿಯದೆ ತಪ್ಪು ಮಾಡಿದ್ದರೆ ಆ ರೀತಿ ಮಾಡಬೇಡಿ ಅದು ಸರಿಯಲ್ಲ ಎಂದು ಹೇಳುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಈ ರೀತಿ ನಡೆಯಿರಿ ಎಂದು ಪೀಸ್ ಕಮಿಟಿಯವರು ಹೇಳಿದ್ದಾರೆ. ನಾವು ಹೇಳಿದ್ದೇವೆ. ಇದಕ್ಕಿಂತ ಏನು ಮಾಡುವುದು ಇದೆ. ಇಬ್ಬರನ್ನೂ ಕರೆಸಿ ರಾಜಿ, ಮಾಡಿ ಖಾಜಿ ನ್ಯಾಯ ಮಾಡಿ ಎಂದು ಹೇಳಿದರೆ ಅದು ತಪ್ಪಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ —ಈಗ ತಾವು ಪೋಲೀಸಿನವರ ವರ್ತನೆ ಸರಿಯಾಗಿತ್ತು, ಅವರು ಚೆನ್ನಾಗಿ ನಡೆದುಕೊಂಡರು ಎಂದು ಹೇಳಿದ್ದೀರಿ. ಈ ಘಟನೆ ನಡೆದಾಗ ನಾನೂ ಸಹ ಮುನ್ಸಿರ್ಪಿ ಪಾಳ್ಯವನ್ನೆಲ್ಲಾ ಸುತ್ತಾಡಿಕೊಂಡು ಬಂದಿದ್ದೇನೆ, ಪ್ರಾರಂಭದಿಂದಲೂ ಪೋಲೀಸಿನವರು ಸರಿಯಾಗಿ ವರ್ತಿಸಿಲ್ಲ ಎಂಬುದು ಗೊತ್ತಾಗಿದೆ. ಒಬ್ಬ ಪೋಲೀಸಿನವರು ಸತ್ತಮೇಲೆ ಪೋಲೀಸಿನವರು

ಸಿಕ್ಕಾಪಟ್ಟೆ ವರ್ತಿಸಿದ್ದಾರೆ ಎಂದು ಅವರ ಮೇಲೆ ಇಲ್ಲದ ನಲ್ಲದ ಆರೋಪಣೆಗಳು ಬಂದಿಲ್ಲವೇ, ಪೋಲೀಸಿನವರಲ್ಲಿ ಕಮ್ಯುನಲ್ ಔಟ್‌ಲುಕ್ ಇತ್ತು ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೆ ?

ಶ್ರೀ ಡಿ. ದೇವರಾಜ ಅರಸ್.—ಪೋಲೀಸ್ ಎನ್ನತಕ್ಕಂಥದ್ದು ಜೀವವಿಲ್ಲದ ಯಂತ್ರವಲ್ಲ. ಅದು ಸಜೀವವಾಗಿ ನಮ್ಮ ಹಾಗೆ ಮನುಷ್ಯರಿಂದ ಕೂಡಿರತಕ್ಕಧ್ದು. ಅವರಿಗೆ ಸ್ವಲ್ಪ ಟ್ರೈನಿಂಗ್ ಆಗಿರುತ್ತದೆ. ಅವರಲ್ಲಿ ಎಲ್ಲೋ ಸಣ್ಣದಾದ ಲೋಪಗಳು ಆಗಿರಬಹುದು. ಆವರಲ್ಲಿ ನೂರಕ್ಕೆ ನೂರೂ ನರಿಯಾಗಿದೆ ಎಂದು ನಾನು ಹೇಳುವುದಿಲ್ಲ. ಬೈ ಅಂಡ್ ಲಾರ್ಜ್ ಜೋಟಲಿ ಅವರು ಏನು ಮಾಡಿದ್ದಾರೆ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಮಾನ್ಯ ಕೃಷ್ಣನ್ ಅವರ ಅನುಭವದಲ್ಲಿ ದುರದೃಷ್ಟವಶಾತ್ ಯಾವುದೋ ಒಂದು ಪೋಲೀಸರ ಘರ್ಷಣೆ ಆಗಿರಬಹುದು. ಅವರ ಅದೃಷ್ಟವೋ ಅಥವಾ ನಮ್ಮ ಅದೃಷ್ಟವೋ ಅಲ್ಲಿ ಎಲ್ಲೋ ಕೆಲವು ಲೋಪಗಳು ಇರಬಹುದು. ಕೆಲವು ದೂರುಗಳು ಬಂದಿವೆ. ಅದೇರೀತಿ ಅಲ್ಲಿ ಪೋಲೀಸರು ಚೆನ್ನಾಗಿ ರಕ್ಷಣೆಯನ್ನು ಕೊಟ್ಟರೂ ಎಂದೂ ವರ್ತಮಾನ ಬಂದಿದೆ. ಅವರೂ ನಮ್ಮ ಹಾಗೇ ಮನುಷ್ಯರು.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಬರೀ ಪೋಲೀಸ್ ರಿಪೋರ್ಟಿನ ಮೇಲೆ ಹೋಗುತ್ತೀರಿ .

ಶ್ರೀ ಡಿ. ದೇವರಾಜ ಅರಸ್.—ಮುನಿಸಿಪ್ಯಾಲಿಟಿಯಲ್ಲಿ ಎಲ್ಲಿಬೇಕಾದರೂ ಹೋಗೋಣ ಬನ್ನಿ! ನಾನು ತಮ್ಮ ಜೊತೆಯಲ್ಲಿ ಬರುತ್ತೇನೆ. ಜನಗಳು ಏನು ಹೇಳುತ್ತಾರೆ ಕೇಳೋಣ. ಅದಿಕಾರಿಗಳು ಕೇಳಬಾರದು ಎಂದು ಏನಾದರೂ ಇದೆಯೇ ?

ಶ್ರೀ ಎಂ. ಎಸ್. ಕೃಷ್ಣನ್.—ಈ ಸಣ್ಣ ವಿಚಾರಕ್ಕೆ ತಾವು ಕೋಪ ಮಾಡಿಕೊಳ್ಳಬಾರದು.

Sri D. DEVARAJ URS.—I know my responsibility. I know to what extent I should take what you say. I know to what extent I should take what the police say and whom I should believe. I do claim to know these things to some extent if not to the full satisfaction of Sri Krishnan, at least to the full satisfaction of some other Members. I cam claim knowledge of men and matters as well as contact with the public as much as Mr. Krishnan can claim. ನಾನು ಎಲ್ಲಾ ಜನರ ಹತ್ತಿರವೂ ಮಾತನಾಡಿದ್ದೇನೆ. ಅಲ್ಲಿ ಮುಖಂಡರು ಯಾರು ಇದ್ದಾರೆ ಅವರ ಹತ್ತಿರ ಮಾತನಾಡಿ ಅವರನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕರೆಸಿ ಕೇಳಿದ್ದೇನೆ. ಎಲ್ಲೆಲ್ಲಿ ಏನೇನು ನಡೆದಿದೆ ಎಂಬುದು ಗೊತ್ತಿದೆ. ಪೋಲೀಸಿನವರಿಗೆ ಇರತಕ್ಕ ವ್ಯಾಪ್ತಿಯಲ್ಲಿಯೇ ಅವರು ಶಕ್ತಿಯನ್ನು ಉಪಯೋಗ ಮಾಡಿದ್ದಾರೆ. ಅಲ್ಲಿ ಆಗತಕ್ಕ ಗಲಭೆಗಳನ್ನು ಬಹಳ ಚೆನ್ನಾಗಿ ತಡೆಗಟ್ಟಿದ್ದಾರೆ. ಮತ್ತು ಜನಗಳಿಗೆ ರಕ್ಷಣೆಯನ್ನು ಕೊಟ್ಟಿದ್ದಾರೆ.

INQUIRY INTO THE ALLEGED POLICE EXCESSES DURING DASARA CULTURAL FESTIVITIES.

ಶ್ರೀ ಪಾಟಾಳ್ ನಾಗರಾಜ್.—ನಿನ್ನೆ ದಿವಸ ಈ ಸಭೆಯಲ್ಲಿ ಮೈಸೂರು ದಸರಾ ಪ್ರಕರಣದ ಬಗ್ಗೆ ಮಂತ್ರಿಗಳಿಂದ ನರಿಯಾದ ಉತ್ತರ ಬರಲಿಲ್ಲ.

ಅಧ್ಯಕ್ಷರು.—ಅದು ನಿನ್ನೆ ದಿವಸವೇ ಮುಗಿದುಹೋಯಿತು. ಈಗ ತಿರುಗಿ ಅದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಿ ಎನ್. ಪಾಟೀಲ್.—ಅದರ ಎಫೆಕ್ಟ್ ಇಡೀ ಸ್ಟೇಟಿಗೆ ಬರುತ್ತದೆ. ಆದ್ದರಿಂದ ಇದರ ಸಂಬಂಧದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಂದ ಕೆಲವು ಅಷ್ಯೂರೆನ್ಸ್ ಕೇಳುವುದು ಇದೆ.

ಅಧ್ಯಕ್ಷರು.—ಆ ರೀತಿ ಅವರು ಅಷ್ಯೂರೆನ್ಸ್ ಕೊಡುವುದಕ್ಕೆ ನಾನು ಪರ್ಮಿಷನ್ ಕೊಡುವುದಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಾಟಾಳ್ ನಾಗರಾಜ್.—ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ ನಿನ್ನೆದಿವಸ ಈ ಸಭೆಯಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಶ್ರೀಮತಿ ಜಯಲಲಿತ ಅವರು ಕೇಸು ಹಾಕಿದ್ದು ಏತಕ್ಕೆ ಎಂಬ ಬಗ್ಗೆ ಉತ್ತರ ಹೇಳಿಲಿಲ್ಲ. ಮತ್ತು ಪೋಲೀಸ್

(ಶ್ರೀ ವಾಟಾಳ್ ನಾಗರಾಜ್)

ಎಕ್ಸೆಸ್ ಬಗ್ಗೆ ಏನೂ ಉತ್ತರ ಹೇಳಲಿಲ್ಲ. ಸಚಿವರಿಂದ ಸೀಮಿತ ಉತ್ತರ ಮಾತ್ರ ಬಂದಿದೆ. ಲೆಕ್ಕ ಪತ್ರಗಳನ್ನು ಆಡಿಟ್ ಮಾಡುವುದಕ್ಕೆ ಇಡುತ್ತೇವೆ ಎಂದು ಹೇಳಿದ್ದಾರೆ. ಪೋಲೀಸ್ ನಡವಳಿಕೆಯ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ ಎಂಬುದನ್ನು ಹೇಳಲಿಲ್ಲ.

ಅಧ್ಯಕ್ಷರು.— ಪೋಲೀಸ್ ಎಕ್ಸೆಸ್ ಅಂಥಾದ್ದು ಯಾವುದೂ ಜಾಸ್ತಿ ಆಗಿಲ್ಲ ಎಂದು ಹೇಳಿದ್ದು ನನಗೆ ಜ್ಞಾಪಕ ಇದೆ.

ಶ್ರೀ ವಾಟಾಳ್ ನಾಗರಾಜ್.— ಅದು ಬಹಳ ಸತ್ಯಕ್ಕೆ ದೂರವಾದ ಮಾತು.

ಅಧ್ಯಕ್ಷರು.— ಅದು ಮಾನ್ಯ ಸದಸ್ಯರ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್.— ಏನು ನಡೆದಿಲ್ಲ ಎಂದು ಇದೇ ರೀತಿ ಸರ್ಕಾರ ಪೋಲೀಸಿನ ಪರಿಗೆ ರಕ್ಷಣೆ ಕೊಟ್ಟುಕೊಂಡು ಹೋದರೆ ನಾವು ಈ ಸಭೆಯಲ್ಲಿ ಇರಬೇಕೇ ಬಿಡಬೇಕೇ ?

ಅಧ್ಯಕ್ಷರು.— ಅದು ನಿಮ್ಮ ಇಷ್ಟ.

ಶ್ರೀ ವಾಟಾಳ್ ನಾಗರಾಜ್.— ಆಡಳಿತ ಪಕ್ಷದವರೇ ಇದನ್ನು ನಡೆಸಬೇಕು ಎನ್ನುವ ಪ್ರಶ್ನೆ ಬರುತ್ತದೆ. ಪೋಲೀಸಿನವರ ದೌರ್ಜನ್ಯದ ಬಗ್ಗೆ ಏನೂ ಹೇಳಿಲ್ಲ, ಈ ಬಗ್ಗೆ ಕೇಂದ್ರದಿಂದ ತನಿಖೆ ನಡೆಯುತ್ತಿದೆ ಎಂದು ನಾನು ಕೇಳಿದ್ದೇನೆ. ಅಲ್ಲಂದ ಏನು ರಿಪೋರ್ಟ್ ಬಂದಿದೆ ಆ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ, ಏನು ಆಗಿಲ್ಲ ಎಂದರೆ ಹೇಗೆ ?

ಅಧ್ಯಕ್ಷರು.—ಈ ವಿಚಾರದಲ್ಲಿ ನೆನ್ನೆದಿನ ಎರಡೂವರೆ ಗಂಟೆ ಚರ್ಚೆಯಾಯಿತು. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅದರ ಬಗ್ಗೆ ಕ್ಲಾರಿಫಿಕೇಷನ್ ಬೇರೆ ಕೇಳಿದ್ದೂ ಆಯಿತು. ಅದಕ್ಕೆ ಸಂಬಂಧಪಟ್ಟ ಲೆಕ್ಕಪತ್ರಗಳನ್ನೂ ಆಡಿಟ್ ಮಾಡಿಸಿ ಅದರ ಸಂಪೂರ್ಣವಾದ ವಿವರಗಳನ್ನು ಈ ಸಭೆಯ ಮುಂದೆ ಇಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ವಿರೋಧಪಕ್ಷದ ನಾಯಕರು ಒಪ್ಪಿಕೊಂಡಿದ್ದಾರೆ. ಇಷ್ಟು ಅವರು ಹೇಳಿದ್ದು ನನಗೆ ಜ್ಞಾಪಕ ಇದೆ. ಆದ್ದರಿಂದ ಪುನಃ ಆ ಇಷ್ಯೂ ಓಪನ್ ಮಾಡುವುದಕ್ಕೆ ಬರುವುದಿಲ್ಲ. ಅದರ ಲೆಕ್ಕಪತ್ರ ಬಂದಾಗ ಆದಮೇಲೆ ಪುನಃ ಅದನ್ನು ಹೇಗೆ ತರಬೇಕೆಂಬ ರೂಲ್ಸು ತಮಗೆ ಗೊತ್ತಿದೆ.

2-30 P.M.

Sri KAGODU THIMMAPPA.—It is a civil contract. A contract can be terminated at will. It was terminated and at best the Silver Jubilee Committee can move for damages for the losses they have sustained, ಇದು ಸಿವಿಲ್ ನೇಚರ್ ಇರುವುದರಿಂದ, ಇದನ್ನು ಪೋಲೀಸರ ವಶಕ್ಕೆ ಕೊಟ್ಟಿದ್ದು ಏತಕ್ಕೆ ? ಅವರು ಪ್ರವೇಶ ಮಾಡಿದ್ದು ಏತಕ್ಕೆ ? ಸಿವಿಲ್ ಸ್ವಭಾವದ ಕೇಸ್‌ನಲ್ಲಿ ಪೋಲೀಸರು ಅನಾವಶ್ಯಕವಾಗಿ ಪ್ರವೇಶ ಮಾಡಿದ್ದಾರೆ. ಅವರ ಮೇಲೆ ಪೋಲೀಸ್‌ನವರು ಐ, ಪಿ. ಸಿ. 420ನೇ ಸೆಕ್ಷನ್ ಪ್ರಕಾರ ಕೇಸನ್ನು ಏನು ರಿಜಿಸ್ಟರ್ ಮಾಡಿಕೊಂಡಿದ್ದಾರೆ, ಅದು ನಿಲ್ಲುವುದಕ್ಕೆ ಸಾಧ್ಯವಿಲ್ಲ. ಇದು ಕೇವಲ ಸಿವಿಲ್ ಡ್ಯಾಮೇಜ್ ಹಾಕುವುದಕ್ಕೆ ಮಾತ್ರ ಅರ್ಹತೆ ಪಡೆದಿದೆ. ಸೆಕ್ಷನ್ 420ರ ಪ್ರಕಾರ ಕೇಸನ್ನು ಹಾಕುವುದು ಎಷ್ಟರಮಟ್ಟಿಗೆ ಸಮಂಜಸವಾಗಿದೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್. —ಮಾನ್ಯ ಸದಸ್ಯರಲ್ಲರುವ ಅನುಮಾನವನ್ನು ಪರಿಹಾರ ಮಾಡುವುದಕ್ಕಾಗಿ ಆ ಬಗ್ಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟಿದ್ದಾರೆ. ಆದ್ದರಿಂದ ಹೇಳುತ್ತೇನೆ. ಸೆಕ್ಷನ್ 420 ರ ಪ್ರಕಾರ ಕೇಸ್ ಹಾಕಬಹುದಾಗಿತ್ತೇ ಅಥವಾ ಇಲ್ಲವೇ ಎಂಬುದು ಇಲ್ಲಿರುವ ಮುಖ್ಯವಾದ ಅಂಶ. It is a debatable and moot point. ನಾನು ಲಾಯರ್ ಅಲ್ಲದೇ ಹೋದರೂ ಸಹ A cantract mutually agreed upon, cannot be unilaterally done away with, I think.. ಒಂದು ವೇಳೆ ಮಾಡಬಹುದು. ಆ ರೀತಿ ತಪ್ಪು ಮಾಡಿದರೆ ಅದರ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ತಮ್ಮ ಅಭಿಪ್ರಾಯದಲ್ಲಿ ಸರ್ಕಾರದವರು ಸಿವಿಲ್ ನೇಚರ್ ಕೇಸ್ ಹಾಕಬಹುದಾಗಿತ್ತು ಎಂಬುದನ್ನು ತಾವೇ ಒಪ್ಪಿಕೊಳ್ಳುತ್ತಿದ್ದೀರಿ. ಡ್ಯಾಮೇಜಸ್ ಕ್ಲೈಮ್ ಮಾಡಬಹುದಾಗಿತ್ತು ಎಂದು ತಾವು ಹೇಳಿದ್ದೀರಿ. ಆ ರೀತಿ ಕ್ಲೇಮ್ ಮಾಡುವುದಕ್ಕೆ ಅವಕಾಶವಿದೆಯೇ; ಇಲ್ಲವೇ ಎಂಬುದನ್ನು

ಸರ್ಕಾರದವರು ನೋಡಿಕೊಳ್ಳುತ್ತಾರೆ. ಸಿವಿಲ್ ನೇಡರ್ ಕೇಸ್ ಹಾಕಬಹುದಾಗಿತ್ತು ಎಂಬುದನ್ನು ಮಾನ್ಯ ಸಭೆ ಒಪ್ಪಿಕೊಂಡಿದೆ. ಆದರೆ ಈ ಸಂದರ್ಭದಲ್ಲಿ ಕ್ರಿಮಿನಲ್ ಕೇಸ್ ಹಾಕಿದ್ದು ಸರಿಯೇ ಅಥವಾ ತಪ್ಪೇ ಎಂಬ ಬಗ್ಗೆ ಏನನ್ನೂ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಏಕೆಂದರೆ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿರುವುದರಿಂದ, ನಾನು ಅದೆಲ್ಲವನ್ನೂ ವಿವರವಾಗಿ ಸ್ಪಷ್ಟ ಮಾಡಬೇಕಾಗಿದೆ. ಪ್ರತ್ಯು ಆ ಒಂದು ಸಂದರ್ಭದಲ್ಲಿ ಪೋಲೀಸ್‌ನವರು ವಿನಾಕಾರಣ ಎಕ್ಸೆಸ್ ಮಾಡಿದ್ದಾರೆ ಎಂಬ ಅಭಿಪ್ರಾಯ ತಮ್ಮಲ್ಲಿ ಇದೆ.

ನೆನ್ನೆದಿವಸ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ನಾನು ಮೇಲ್ಮನೆಯಲ್ಲಿ ಇದ್ದೆ. ಇಲ್ಲಿಯೇ ನಾನು ಇದ್ದಿದ್ದರೆ ನಾನು ಆಗಲೆ ಹೇಳುತ್ತಿದ್ದೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಪೋಲೀಸಿನವರು ವಿನಾಕಾರಣ ಎಕ್ಸೆಸ್ ಮಾಡಿಲ್ಲ ಎಂದು ಹೇಳಿದ್ದಾರೆ. ಆದರೆ ಅದು ಬಗ್ಗೆ ಅನುಮಾನವಿದೆ ಎಂದು ತಾವು ಹೇಳುತ್ತಿದ್ದೀರಿ. ಮಂತ್ರಿಗಳು ಉತ್ತರ ಕೊಟ್ಟಿದ್ದಾರೆಂದು ನಾನು ಆ ವಿಷಯವನ್ನು ಮುಕ್ತಾಯ ಮಾಡುವುದಿಲ್ಲ. ತಾವು ಹೇಳಿರುವುದರಿಂದ ಮತ್ತೆ ಅವನ್ನು ನೋಡುತ್ತೇನೆ. ಏತನ್‌ಮಧ್ಯೆ ನಾನು ಇಂದು ಪತ್ರಿಕೆ ಓದಿದ ಪ್ರಕಾರ ಉಭಯತ್ರರೂ ಲೀಗರ್ ಆಗಿ ನೋಟೀಸ್ ಕೊಟ್ಟಿದ್ದಾರೆಂದು ಮತ್ತು ಲಾಯರ್ ಮುಖಾಂತರ ವ್ಯವಹಾರಗಳನ್ನು ನಡೆಸುತ್ತಿದ್ದಾರೆಂದು ತಿಳಿದುಬಂತು. ಈ ಪ್ರಕರಣದ ನಂತರ ಕುಮಾರಿ ಜಯಲಲಿತಾ ಅವರು ಪ್ರಧಾನ ಮಂತ್ರಿಗಳಿಗೆ ಬರೆದ ಕಾಗದದ ಕಾಪಿ ಒಂದನ್ನು ನನಗೂ ಸಹ ಕಳಿಸಿಕೊಟ್ಟಿದ್ದಾರೆ. ಮತ್ತು ಅವರು ನನ್ನನ್ನು ಬಂದು ನೋಡುವುದಾಗಿ ಹೇಳಿದ್ದರು. ನಾನು ಸಹ ಬಂದು ನೋಡಬಹುದು ಎಂದು ಹೇಳಿದ್ದೆ. ಆದರೆ ಅವರಿಗೆ ಏನು ತೊಂದರೆಯಾಯಿತೋ, ಬರಲಿಲ್ಲ. ಮುಖತಃ ಅವರು ಬಂದು ನನ್ನ ಹತ್ತಿರ ಏನು ಹೇಳುತ್ತಾರೆ ಎಂಬುದು ಇನ್ನೂ ನನಗೆ ಗೊತ್ತಾಗಿಲ್ಲ. ಆದ್ದರಿಂದ ನಾನು ಎಲ್ಲ ವಿಚಾರಗಳನ್ನೂ ತಿಳಿದುಕೊಳ್ಳಬೇಕಾಗಿದೆ. ಈ ವ್ಯವಹಾರದಲ್ಲಿ ಅವರಿಗೂ ಮತ್ತು ದಸರಾ ಉತ್ಸವದ ಸಾಂಸ್ಕೃತಿಕ ವ್ಯವಹಾರಗಳ ಅಧ್ಯಕ್ಷರಿಗೂ ಕಾಗದಪತ್ರಗಳ ವ್ಯವಹಾರ ನಡೆದಿದೆ. ನೆನ್ನೆದಿವಸ ಮಾನ್ಯ ದೇವೇಗೌಡರು ಮಾತನಾಡುವಾಗ ಜಯಲಲಿತಾ ಅವರು ಕಾರ್ಯಕ್ರಮವನ್ನು ರದ್ದು ಮಾಡಿದ ಬಗ್ಗೆ ಅಕ್ಟೋಬರ್ 15 ರಂದು ಕಾಗದ ಬರೆದರು ಮತ್ತು 18ನೇ ತಾರೀಖು ಟೆಲಿಗ್ರಾಂ ಕೊಟ್ಟರು ಎಂದು ಹೇಳಿದರು. ಅಂದಮೇಲೆ ಅವರಿಗೂ ಸಹ ಅನೇಕ ವಿಚಾರಗಳು ಗೊತ್ತಿರಬಹುದು. ಅವರಿಗೂ ಜಯಲಲಿತಾ ಅವರು ಪತ್ರಗಳನ್ನು ಬರೆದಿರಬಹುದೆಂದು ಕಾಣುತ್ತದೆ. ಮುಖ್ಯವಾಗಿ ದಸರಾ ಉತ್ಸವದ ಸಾಂಸ್ಕೃತಿಕ ಕಾರ್ಯಕ್ರಮದ ನಭೆ-ಕಮಿಟಿಯ ವರಿಗೂ ಕುಮಾರಿ ಜಯಲಲಿತಾ ಅವರಿಗೂ ಏನೇನು ಪತ್ರವ್ಯವಹಾರ ನಡೆದಿದೆ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಯಾವುದೇ ಒಂದು ಪ್ರಕರಣಕ್ಕೂ ಒಂದು ಹಿನ್ನೆಲೆ ಇರುತ್ತದೆ. ಆ ಒಂದು ಹಿನ್ನೆಲೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ನೋಡಿದಾಗ, ಈ ಘಟನೆಯಲ್ಲಿ ಪೋಲೀಸಿನವರು ಮಾಡಿದುದು ಎಕ್ಸೆಸ್ ಹೌದೋ ಅಲ್ಲವೋ ಎಂಬುದನ್ನು ತೂಕಮಾಡಿ ಪರಿಶೀಲಿಸುವುದಕ್ಕೆ ನನಗೆ ಸ್ವಲ್ಪ ಕಾಲಾವಕಾಶ ಕೊಡಬೇಕು. ಆ ರೀತಿ ತೂಕ ಮಾಡಿ ನೋಡುವಾಗ, ಆ ಕಮಿಟಿಯ ಛೇರ್‌ಮನ್ ಆಗಿರುವ ಕೆ. ಕೆ. ಮೂರ್ತಿ ಅವರ ಪ್ರಭಾವಕ್ಕೆ ನಾನು ಒಳಗಾಗುತ್ತೇನೆ ಎನ್ನುವ ಅನುಮಾನ ಮಾನ್ಯ ಸದಸ್ಯರಿಗೆ ಬೇಡ. ತಪ್ಪು ಯಾರು ಮಾಡಿದರೂ ತಪ್ಪೇ ಆಗುತ್ತದೆ. ನಾನು ತಪ್ಪು ಮಾಡಿದರೂ ತಪ್ಪೇ ಆಗುತ್ತದೆ. ಶ್ರೀಮಾನ್ ಕೆ. ಕೆ. ಮೂರ್ತಿಯವರು ತಪ್ಪು ಮಾಡಿದ್ದರೆ ಅದೂ ಸಹ ತಪ್ಪೇ ಆಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಮಾನ್ಯ ಸದಸ್ಯರು ಭಾವೋದ್ರೇಕಕ್ಕೆ ಒಳಗಾಗುವುದು ಬೇಡ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಆಯಾ ಸನ್ನಿವೇಶದಲ್ಲಿ ಯಾರು ಏನು ತಪ್ಪು ಮಾಡಿದ್ದಾರೆ, ಅವರು ಮಾಡಿದ್ದು ಎಷ್ಟರಮಟ್ಟಿಗೆ ಸರಿಯಾಗಿದೆ, ಎಷ್ಟರಮಟ್ಟಿಗೆ ತಪ್ಪಾಗಿದೆ ಎಂಬುದನ್ನು ನೋಡಬೇಕು ಎಂಬುದು ತಮ್ಮ ಅಭಿಪ್ರಾಯವಾಗಿದೆ. ಅದನ್ನು ಆಗತ್ಯವಾಗಿ ನೋಡೋಣ. ಇದರಲ್ಲಿ ಪೋಲೀಸಿನವರು ಎಷ್ಟರಮಟ್ಟಿಗೆ ತಪ್ಪಿತಸ್ಥರಾಗಿದ್ದಾರೆಂಬುದನ್ನು ಸಹ ತರಿಸಿ ನೋಡುತ್ತೇನೆ. ತಪ್ಪು ಮಾಡಿದವರು ಅದಕ್ಕೆ ತಕ್ಕ ಹಾಗೆ ಶಿಕ್ಷೆ ಅನುಭವಿಸಬೇಕಾಗುತ್ತದೆ. ಇಷ್ಟು ಮಾತ್ರ ಈ ವಿಚಾರದಲ್ಲಿ ನಾನು ಹೇಳಬಲ್ಲೆ.

ಶ್ರೀ ಹೆಚ್. ಡಿ. ದೇವೇಗೌಡ.—ನೆನ್ನೆದಿವಸ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಈ ಸಭೆಯ ಮುಂದೆ ಅದಕ್ಕೆ ಸಂಬಂಧಪಟ್ಟ ಎಲ್ಲ ಲೆಕ್ಕ ಪತ್ರಗಳನ್ನು ಆಡಿಟ್ ಆದ ಮೇಲೆ ಇಡುತ್ತೇನೆಂದು ಹೇಳಿದರು. ಆಡಿಟ್ ಮಾಡಿಸುವುದಕ್ಕೆ ಎಷ್ಟು ಕಾಲ ಬೇಕಾಗುತ್ತದೆ ಮತ್ತು ಎರಡು ಲಕ್ಷ 60 ಸಾವಿರ ರೂಪಾಯಿಗಳ ವ್ಯವಹಾರದ ವಿವರಗಳನ್ನು ಸಭೆಯ ಮುಂದೆ ಇಡಲು ಎಷ್ಟು ಕಾಲ ಬೇಕಾಗುತ್ತದೆ ಎಂಬ ವಿವರಗಳನ್ನು ಕೊಡಬೇಕು.

ಶ್ರೀ ಅಜೀಜ್‌ಸೇಟ್.—ದಸರಾ ಉತ್ಸವದ ಕಮಿಟಿಯ ಫೈನಲ್ ಬ್ಯಾಲೆನ್ಸ್ ಇನ್ನೂ ಆಗಿಲ್ಲ. ದಸರಾ ಉತ್ಸವಕ್ಕೆ ಸಂಬಂಧಪಟ್ಟಂತೆ ಅನೇಕ ಸಬ್-ಕಮಿಟಿಗಳಿವೆ. ಆ ಕಮಿಟಿಗಳಿಂದ

(ಶ್ರೀ ಆಜೀಜ್ ಸೇಟ್)

ಲೆಕ್ಕಪತ್ರಗಳು ಬಂದಮೇಲೆ ಆಡಿಟ್ ಮಾಡಿಸಿ, ಕಾಂಪ್ರೆಹೆನ್ಸಿವ್ ಸ್ಟೇಟ್‌ಮೆಂಟ್‌ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಎಷ್ಟು ದಿವಸಗಳಲ್ಲಿ ಸಭೆಯ ಮುಂದೆ ಇಡುತ್ತೀರಾ ಎಂಬುದನ್ನು ತಿಳಿಸಬೇಕು ?

Sri AZEEZ SAIT.—I cannot audit; nor can I sit in judgement over audit. I must get it done and I will get it done. It is impossible for me to say exactly the time. It may be a month or two.

ಶ್ರೀ ಎಚ್. ಡಿ ದೇವೇಗೌಡ.—ಒಂದೆರಡು ತಿಂಗಳ ಕಾಲ ಬೇಕಾಗುತ್ತದೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಈ ಸಭೆ ಈ ತಿಂಗಳ 20ರಂದು ಮುಕ್ತಾಯವಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಮುಕ್ತಾಯವಾದರೆ ಮತ್ತೆ ಸಭೆ ಸೇರುವುದೇ ಇಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ.—ಮತ್ತೆ ಸೇರುವುದು ಮಾರ್ಚ್ ತಿಂಗಳಿಗೆ.

ಅಧ್ಯಕ್ಷರು.—30 ಅಥವಾ 60 ದಿವಸಗಳೊಳಗೆ ಸಭೆಯ ಮುಂದೆ ಇಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ತಾವು ಕುಳಿತುಕೊಳ್ಳಿ.

Sri AZEEZ SAIT.—There is no hide and seek about it. Everything is clear—crystal clear and everything can be given to the last pie in a very clear manner. I will place a comprehensive statement so that none of the Hon'ble Member's can have any doubts in their minds.

ಶ್ರೀ ಎಚ್. ಡಿ. ದೇವೇಗೌಡ.—ಸುಮ್ಮನೆ ಇದರ ಬಗ್ಗೆ ವಿವರಗಳನ್ನು ಕೊಡುತ್ತೇನೆಂದು ಹೇಳಿದರೆ ಇದು ಯಾವಾಗ ಬರಬಹುದು ಎನ್ನುವುದನ್ನು ನಿರ್ದಿಷ್ಟವಾಗಿ ಇಲ್ಲಿ ತಿಳಿಸಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

Sri AZEEZ SAIT.—In a month or two.

ಶ್ರೀ ಹೆಚ್. ಡಿ. ದೇವೇಗೌಡ.—ಇದಕ್ಕೆ 60 ದಿನಗಳು ಬೇಕೆಂದರೆ ಅಧ್ಯಕ್ಷರೇ ತಾವೇ ಇದರ ಬಗ್ಗೆ ನಿರ್ಣಯ ಮಾಡಬಹುದು.

ಅಧ್ಯಕ್ಷರು.—ಅವರು ಎಲ್ಲ ವಿಚಾರಗಳನ್ನೂ ಸಮಗ್ರವಾಗಿ ವಿಚಾರ ಮಾಡಿ ವರದಿ ಕೊಡಲಿ. ಆದಕ್ಕೆ ಸ್ವಲ್ಪ ಅವಕಾಶ ಕೊಡೋಣ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಹೇಳಿಕೆ ಕೊಡುವಾಗ ಇದರಲ್ಲಿ ಯಾರೇ ತಪ್ಪು ಮಾಡಿರಲಿ ಅವರಿಗೆ ಶಿಕ್ಷೆ ಮಾಡಲೇಬೇಕಾಗುತ್ತದೆ ಎಂದು ಹೇಳಿದರು. ಇದರ ಬಗ್ಗೆ ಯಾವ ತಾತರತಮ್ಯವನ್ನು ಮಾಡುವುದೂ ಬೇಡ ಎಂದು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವ ಮಾತಿನಲ್ಲಿ ನಮಗೂ ನಂಬಿಕೆ ಇದೆ. ಆದರೆ ನಾನು ಅವರಲ್ಲಿ ಮನವಿ ಮಾಡಿಕೊಳ್ಳುವುದು ಆದಷ್ಟು ಶೀಘ್ರವಾಗಿ ಇದರ ಬಗ್ಗೆತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಅವರನ್ನು ಕೇಳಿಕೊಳ್ಳುತ್ತೇನೆ.

Request for the tour of the one man commission in Raichur district

ಶ್ರೀ ಶರಣಪ್ಪ.—ಶ್ರೀಮಾನ್ ಆರುಮುಗಂ ನೇತೃತ್ವದ ಕಮಿಟಿಯವರ ಟೂರು ಪ್ರೋಗ್ರಾಂ ಬಂದಿದೆ. ಅದನ್ನು ನೋಡುವಾಗ ರಾಯಚೂರು ಜಿಲ್ಲೆಗೆ ಅವರು ಬರುವುದಿಲ್ಲ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡುವುದು ರಾಯಚೂರು ಜಿಲ್ಲೆ ಕೂಡ ಸಾಕಷ್ಟು ಬರಗಾಲಕ್ಕೆ ಒಳಗಾಗಿದೆ. ಅದರಲ್ಲೂ ದೇವದುರ್ಗ, ಮಾನ್ವಿ ಹಾಗೂ ಸಿಂಧನೂರು ಮತ್ತು ಇವರ ಅಕ್ಕಪಕ್ಕದಲ್ಲಿರುವ ಹಳ್ಳಿಗಳು ತೀವ್ರ

ಬರಗಾಲಕ್ಕೆ ಸಿಕ್ಕಿ ದನಗಳಿಗೆ ಮೇವೇ ಸಿಗುತ್ತಿಲ್ಲ, ಬೆಳೆ ಮಾಡಲು ಬಿತ್ತನೆ ಬೀಜ ಇಲ್ಲ, ಜನಕ್ಕೆ ಅನ್ನ ಸಿಗುತ್ತಿಲ್ಲ ಮತ್ತು ಕುಡಿಯುವ ನೀರಿಲ್ಲ, ಇಂತಹ ಪರಿಸ್ಥಿತಿಗೆ ಒಳಗಾಗಿರುವಾಗ ಈ ಕಮಿಟಿಯವರು ಹೋಗುವಾಗ ಇವರು ರಾಯಚೂರು ಜಿಲ್ಲೆ ಕಡೆಗೂ ಹೋಗಿ ಅಲ್ಲಿನ ಪರಿಸ್ಥಿತಿ ಕಡೆಗೆ ವರದಿ ಮಾಡುವುದು ಒಳ್ಳೆಯದು. ಮತ್ತು ನಾನು ಇಲ್ಲಿನ ಬರಗಾಲದ ಸ್ಥಿತಿಗೆ ಮಾನ್ಯ ಮುಖ್ಯ ಮಂತ್ರಿಗಳ ಕಡೆಗೆ ಹಾಗೂ ಫೈನಾನ್ಸ್ ಮಿನಿಸ್ಟರ ಕಡೆಗೆ ಪತ್ರ ಕೂಡ ಬರಿದಿದ್ದೇನೆ ಅದರಂತೆ ರೆವೆನ್ಯೂ ಮಂತ್ರಿಗಳಿಗೂ ಪತ್ರ ಬರಿದಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ಅಲ್ಲಿಗೂ ಕಳುಹಿಸೋಣ.

NOTICE AGAINST AN OFFICER AT THE MYSORE HOUSING BOARD

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ತಮ್ಮ ಕಡೆಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇನೆ ಅದು ಹೌಸಿಂಗ್ ಬೋರ್ಡ್‌ನಲ್ಲಿರುವ ಒಬ್ಬ ಐ. ಎ. ಎಸ್. ಅಧಿಕಾರಿಗಳು ಅವರ ಸಿಬ್ಬಂದಿವರ್ಗದಲ್ಲಿರುವ ಹೆಣ್ಣು ಮಕ್ಕಳ ಬಗ್ಗೆ ಬಹಳ ಅಪವೇಕವಾಗಿ ವರ್ತಿಸಿದುದರ ಹಾಗೂ ಇನ್ನಿತರ ಅಧಿಕಾರಿಗಳ ಬಗ್ಗೆ ಬಹು ಇಲ್‌ಟ್ರೀಟು ಮಾಡುತ್ತಿರುವುದರ ವಿಷಯಕ್ಕೆ ಸಂಬಧಿಸಿದೆ. ಇದನ್ನು ನಾನು ಕಳುಹಿಸಿ ಆರು ದಿನಗಳಾದವು. ಸರಕಾರದ ಕಡೆಯಿಂದ ಇದರ ಬಗ್ಗೆ ಉತ್ತರ ಬಾರದಿದ್ದರೆ ಹೇಗೆ? ಇಲ್ಲಿನ ಅಧಿಕಾರಿಗಳ ಕೈಕೆಳಗೆ ಕೆಲಸ ಮಾಡುವ ಹೆಣ್ಣು ಮಕ್ಕಳಿಗೆ ಬಹು ಅವಮಾನವಾಗಿದೆ. ಇದು ಬಹಳ ಪ್ರಾಮುಖ್ಯವಾದ ವಿಚಾರ ತಾವು ಹೆಣ್ಣುಮಗಳಾಗಿರುವುದರಿಂದ ತಮ್ಮಲ್ಲಿ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ನಾನು ಹೆಣ್ಣು ಮಗಳು ಎನ್ನುವುದು ಎಲ್ಲರಿಗೂ ಗೊತ್ತಿದೆ, ಇದರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ತಮ್ಮ ಕಾಲಿಂಗ್ ಅಟೆನ್ಷನ್ ನೋಟೀಸ್ ಅವರ ಕಡೆಗೆ ಕಳುಹಿಸಲಾಗಿದೆ. ಒಂದು ದಿನಕ್ಕೆ ಒಂದೇ ಕಾಲಿಂಗ್ ಅಟೆನ್ಷನ್ ಇಲ್ಲಿ ತೆಗೆದುಕೊಳ್ಳಬೇಕೆಂದು ನಿಯಮ ಇದೆ. ಅದರಂತೆ ತಮ್ಮ ಸೂಚನೆಯೂ ಬರುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ಹಿರಿಯ ಅಧಿಕಾರಿಗಳ ಕೈಕೆಳಗೆ ಇರುವ ಇತರ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೆ ಇಲ್ಲಿನ ಕೆಲಸಗಳು ಸ್ಥಗಿತವಾಗಿವೆ. ಇದು ಪ್ರಾಮುಖ್ಯವಾದ ವಿಷಯವಲ್ಲವೇ?

ಅಧ್ಯಕ್ಷರು.—ಪ್ರಾಮುಖ್ಯವೇನೋ ಸರಿ. ಆದರೆ ಸರಕಾರದ ಕಡೆಯಿಂದ ಉತ್ತರ ಕಳುಹಿಸಲಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಈ ಸೂಚನೆ ಕಳುಹಿಸಿ ಆರು ದಿನಗಳಾದವು. ಉತ್ತರ ಬರದಿದ್ದರೆ ನಾವೇನು ಮಾಡೋಣ? ಸರಕಾರದ ಹಿರಿಯ ಅಧಿಕಾರಿಗಳು ತಮ್ಮ ಕೈ ಕೆಳಗೆ ಕೆಲಸ ಮಾಡುವ ಗಂಡಸರ ಹಾಗೂ ಹೆಂಗಸರು ಬಗ್ಗೆ ಸೌಹಾರ್ದದಿಂದ ನಡೆದುಕೊಳ್ಳಬೇಕು. ಹಾಗೆ ಮಾಡದೆ ಬಹು ಅಸಭ್ಯ ರೀತಿಯಿಂದ ಹೆಣ್ಣು ಮಕ್ಕಳ ಬಗ್ಗೆ ಇಲ್ಲಿನ ಹಿರಿಯ ಅಧಿಕಾರಿಗಳು ವರ್ತಿಸಿದ್ದಾರೆ, ಹೆಣ್ಣು ಮಕ್ಕಳ ಬಗ್ಗೆ ಬಹಳ ಅವ್ಯವಹಾರ ಮಾಡಿದ್ದಾರೆ, ಇದನ್ನು ಇಲ್ಲಿ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ, ಇದು ಸೀರಿಯಸ್ ಆದ ವಿಚಾರವಲ್ಲವೇ. ಇಲ್ಲಿನ ಅಧಿಕಾರಿಗಳನ್ನು ಸಸ್‌ಪೆಂಡ್‌ಮಾಡಬೇಕೆಂದು ತಾವು ಸರಕಾರಕ್ಕೆ ತಿಳಿಸಿ ಇವರ ಬಗ್ಗೆ ವಿಚಾರಣೆ ನಡೆಸುವುದು ಅಗತ್ಯ ಎಲ್ಲ ಕಚೇರಿಗಳಲ್ಲೂ ಇರುವ ಐ.ಎ.ಎಸ್. ಅಧಿಕಾರಿಗಳೇ ಅಗಲೇ ಇಲ್ಲವೇ ಹಿರಿಯ ಅಧಿಕಾರಿಗಳೇ ಆಗಲೇ ಹೆಣ್ಣು ಮಕ್ಕಳ ಬಗ್ಗೆ ಹಾಗೂ ಗಂಡಸರ ಬಗ್ಗೆ ಸೂಕ್ತವಾದ ರೀತಿಯಲ್ಲಿ ಕೆಲಸ ಮಾಡಲು ವ್ಯವಸ್ಥೆ ಮಾಡಿದರೆ ಅಷ್ಟೇ ಸಾಕು.

ಶ್ರೀ ಎಚ್. ಡಿ. ದೇವೇಗೌಡ.—ಈ ವಿಷಯ ಇಲ್ಲಿ ಬಂದುದರಿಂದ ಇದರ ಬಗ್ಗೆ ಮಾನ್ಯ ಅಧ್ಯಕ್ಷರಲ್ಲಿ ನನ್ನದೊಂದು ಸಲಹೆ ಇದೆ. ಇದರ ಬಗ್ಗೆ ಸರಕಾರದ ಉತ್ತರ ಬರುತ್ತದೆ, ನಾವು ಇದರ ಬಗ್ಗೆ ಕ್ವಾಲಿಫಿಕೇಷನ್ ಕೇಳುತ್ತೇವೆ. ಆದಿರಲಿ ತಾವು ಸರಕಾರಕ್ಕೆ ಇದರ ಬಗ್ಗೆ ತಮ್ಮ ಪರ್ಮಿಷನ್ ಕೊಡುವುದಕ್ಕೆ ಮುಂಚೆ ಮಾನ್ಯ ಸದಸ್ಯರು ಇಲ್ಲಿ ಏನು ಹೇಳಿದ್ದಾರೆ ಇದರ ಬಗ್ಗೆ ದೂರನ್ನು ಕೊಡಲು ಬಂದ ಹೆಣ್ಣು ಮಕ್ಕಳ ಬಗ್ಗೆ ಮಂತ್ರಿಗಳು ಯಾವ ರೀತಿ ವರ್ತಿಸಿದ್ದಾರೆ ಅದಕ್ಕಾಗಿ ತಾವೇ ಮಂತ್ರಿಗಳನ್ನು ಕರೆಸಿಕೊಂಡು ಅವರ ರಿಕಾರ್ಡುಗಳನ್ನು ನೋಡಿ ಆ ನಂತರ ಹೆಣ್ಣು ಮಕ್ಕಳ ದೂರನ್ನೂ

(ಶ್ರೀ ಹೆಚ್. ಡಿ. ದೇವೇಗೌಡ)

ನೋಡಿ ತಾವೇ ಸಮಾಧಾನ ಮಾಡಿಕೊಂಡು ಇದರ ಬಗ್ಗೆ ಹೇಳಲಿ. ಇದು ತಮಗೆ ಸಮಾಧಾನ ವಾಗಿದೆ ಎಂದು ಕಂಡರೆ ನಮಗೆ ಆಷ್ಟೇ ಸಾಕು. ನಾವು ವಿವರಮಾಡಲು ಇಲ್ಲ ಹೋಗುವುದಿಲ್ಲ. ಸನ್ಮಾನ್ಯ ಸದಸ್ಯರು ಇಲ್ಲ ಹೇಳುತ್ತಿರುವುದು ಮಾನ್ಯ ಮುಂತ್ರಿಗಳು ಹೆಣ್ಣು ಮಕ್ಕಳ ಬಗ್ಗೆ ಯಾವ ರೀತಿ ವರ್ತಿಸಿದರು ಎನ್ನುವುದರ ಬಗ್ಗೆ ತಮ್ಮ ಗಮನ ಸೆಳೆಯುತ್ತಿದ್ದಾರೆ. ಇದಕ್ಕಾಗಿ ತಾವು ಸರಕಾರಕ್ಕೆ ಅಪ್ಪಣೆ ಕೊಡುವ ಮುನ್ನ ಇದನ್ನು ತಾವೇ ಪರಿಶೀಲನೆ ಮಾಡಿ ನೋಡಬಹುದು.

REQUEST FOR THE TOUR OF THE ONE MAN COMMISSION IN RAICHUR DISTRICT.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಸ್ವಾಮಿ, ಅರೋಗ್ಯ ಇಲಾಖೆಯಲ್ಲಿ ರೆಕ್ರೂಟ್‌ಮೆಂಟು ಕಮಿಟಿ ಎಂದು ಮಾಡಿದ್ದಾರೆ. ಇದರ ಬಗ್ಗೆ ನಾನು ತಮ್ಮ ಕಡೆಗೆ ಒಂದು ಅಲ್ಪ ಕಾಲಾವದಿ ಪ್ರಶ್ನೆ ಕಳುಹಿಸಿದ್ದೇನೆ. ಇಲ್ಲಿ ಮಾಡಿರುವ ರೆಕ್ರೂಟ್‌ಮೆಂಟು ಕಮಿಟಿಯಲ್ಲಿ ಬಹಳ ಅವ್ಯವಹಾರಗಳು ಆಗುತ್ತಿವೆ. ಮಾನ್ಯ ಆರೋಗ್ಯ ಸಚಿವರು ಇಲ್ಲಿರುವುದರಿಂದ ಇದರ ಬಗ್ಗೆ ಅವರಿಗೂ ಅನುಮಾನ ಬಂದಿರಬಹುದು ಮಾನ್ಯ ಆರೋಗ್ಯ ಮಂತ್ರಿಗಳು ನನ್ನ ಪ್ರಶ್ನೆ ತೆಗೆದುಕೊಳ್ಳುವುದಕ್ಕೆ ಮುಂಚೆ ಇಲ್ಲಿರುವ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ರದ್ದು ಮಾಡಬೇಕೆಂದು ಅವರಲ್ಲಿ ಕೇಳುತ್ತೇನೆ. ನನಗೆ ಇದರ ಬಗ್ಗೆ ಒಂದೆರಡು ಉದಾಹರಣೆಗಳು ದೊರೆತಿವೆ.

ಅಧ್ಯಕ್ಷರು.—ತಮ್ಮ ಪ್ರಶ್ನೆ ಸರಕಾರದ ಕಡೆಗೆ ಕಳುಹಿಸಿದ್ದೇನೆ. ಉತ್ತರ ಬಂದಾಗ ತಾವು ಹೇಳಬಹುದು.

PROCEDURE FOR ADMISSION OF QUESTIONS

Sri B. B. SAYANAK.—Last Monday when the Session started, I have given a call attention notice. So far we have not know whether that statement has gone to the Department or not. What is the procedure? I have given some questions which is bearing No. 242. In the list of answers, Q. No. 260 has been answered today. Two months back, I have given my question. What is the procedure for answering questions? It is a very serious matter.

Madam SPEAKER.—As and when we receive answers from the Government, we will put them on the list. The Hon. Member may Please come to my Chamber. I will explain to him.

STATEMENT OF THE MINISTER FOR HEALTH *re*: SELECTION OF INSPECTORS IN HEALTH DEPARTMENT

† Sri H. SIDDAVEERAPPA (Minister for Health).—The matter according to Sri Kagodu Thimmappa is of importance because the interviews are being conducted just now. These interviews are

Inspectors, Para Medical Workers, Malaria Survey Workers, Typists, etc.—in all about hundreds of appointments. Certain complaints have been brought to my notice also. This committee was constituted not by this Government but at the time of the Governor's rule. I feel that a purely official committee would be desirable in view of the complaints that have been received. Therefore, I will pass orders for cancelling this committee and constituting a purely official committee consisting of the Director of Health Services as the Chairman and one or two officers and will ask the present committee to discontinue their work.

CLARIFICATION WITH REGARD TO EXPENDITURE ON VISIT OF OFFICERS TO U.S.A.

Yesterday, with regard to the interpellation of Sri Bangarappa I gave certain answers which require some clarification. It may please be noted that the entire expenditure on this project is borne by the Government of India and no portion of it is debitable to the State Government. The State Government is an agency for the Government of India in the implementation of this project. The Government of India in turn are financed by the World Bank with a loan of Rs. 7.34 crores and an outright grant of Rs. 3.76 crores by the Kingdom of Sweeden. As far as the loan is concerned, it is repayable over a period of 50 years with another 15 years' grace period and interest is charged at three-fourth per cent which is known as service charge. The question of repayment of the loan will be taken care of by the Government of India and the State Government has nothing to do with it. Arising out of this we will be having in this area about 694 new hospitals called sub-centres.

ಶ್ರೀ ಕೋಣಂಡೂರು ಲಿಂಗಪ್ಪ.—8 ದಿವಸಗಳಾಯಿತು, ಅಲ್ಪಕಾಲಾವಧಿ ಪ್ರಶ್ನೆ ಕಳುಹಿಸಿ ಇನ್ನೂ ಉತ್ತರವಿಲ್ಲ. ಒಂದು ತಿಂಗಳ ಹಿಂದೆ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೆ, ಅದಕ್ಕೂ ಉತ್ತರವಿಲ್ಲ. ಈ ರೀತಿಯನ್ನು ನೋಡಿದರೆ ಸರ್ಕಾರ ಎಷ್ಟು ವೇಗವಾಗಿ ಹೋಗುತ್ತದೆ ಎಂದು ವಿಷಾದ ವ್ಯಕ್ತಪಡಿಸಬೇಕಾಗುತ್ತದೆ. ತಮಗೆ ಹೇಳುತ್ತೇನೆ ಅದಷ್ಟು ಬೇಗ ಉತ್ತರ ಕೊಡಿಸಬೇಕು.

ಅಧ್ಯಕ್ಷರು.— ಆಗಲಿ.

PROTECTION TO THE MEMBERS

ಶ್ರೀ ಎಚ್. ಎಸ್. ಸಿದ್ದಪ್ಪ.—ಈಗ ನಾನು ಹೇಳುತ್ತಿರುವುದು ನಮ್ಮ ಜೀವಮಾನದ ಪ್ರಶ್ನೆ. ಪತ್ರಿಕೆಯಲ್ಲಿ ಬಂದಿದೆ ನಮ್ಮನ್ನು ಖೂನಿ ಮಾಡುವುದಕ್ಕೆ ಹೊರಟಿದ್ದಾರೆ, ನಮ್ಮ ಕ್ಷೇತ್ರದಲ್ಲಿ ನಾವು ಬದುಕುವುದು ಕಷ್ಟವಾಗಿದೆ. ನಮ್ಮ ರೂಪಿಗೆ ನುಗ್ಗುತ್ತಾರೆ, ಹೊಡೆಯುವುದಕ್ಕೆ ಬರುತ್ತಾರೆ. ತಾವು ನಮಗೆ ಪ್ರೊಟೆಕ್ಷನ್ ಕೊಡಬೇಕು. ಹೀಗಾದರೆ ಹೇಗೆ ನಾವು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಕೆಲಸ ಮಾಡುವುದು ?

ಅಧ್ಯಕ್ಷರು.—ಅಷ್ಟು ಲಘುವಾಗಿ ಮಾತನಾಡಬಾರದು. ಹಾಗೆ ಬಂದರೆ ಕೂಡಲೇ ಕಂಪ್ಲೆಂಟ್ ಕಳುಹಿಸಬೇಕು. ಇಪ್ಪತ್ತರವರೆಗೆ ಕಂಪ್ಲೇಂಟ್ ಬಂದಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕಂಪ್ಲೇಟ್ ಕಳುಹಿಸುವುದಕ್ಕೆ ಅಷ್ಟು ಪುರಸತ್ತು ಇರುತ್ತದೆಯೇ?

ಅಧ್ಯಕ್ಷರು.—ಇಲ್ಲಿ ಬಂದು ಹೇಳುವುದಕ್ಕೆ ಪುರಸತ್ತು ಇದೆಯೇ?

ಶ್ರೀ ಎಚ್. ಎಸ್. ಸಿದ್ದಪ್ಪ.—ಪ್ರೋಲೀಸರಿಗೆ ಒಂದು ನಿರ್ದಿಷ್ಟವಾದ ತಿಳುವಳಿಕೆ ಸರ್ಕಾರ ಕೊಟ್ಟಹಾಗೆ ಕಾಣುತ್ತದೆ. ಆದಳಿತ ಕಾಂಗ್ರೆಸ್ ಬಿಟ್ಟು ಬೇರೆ ಯಾರಾದರು ಆದರೆ ವಿಚಾರಿಸಿಕೊಳ್ಳಿ ಎಂದು ಹೇಳಿದ ಹಾಗೆ ಕಾಣುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಸಂದರ್ಭ ಗೊತ್ತಾಗಲಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ತಮ್ಮ ಕ್ಷೇತ್ರದಲ್ಲಿ ಗೊತ್ತಾಗುವುದಿಲ್ಲ. ಇದರ ಬಗ್ಗೆ ನಿರ್ದಿಷ್ಟವಾಗಿ ಮುಖ್ಯಮಂತ್ರಿಗಳನ್ನು ಕರೆಸಿ ಕೇಳಿ. ವಿರೋಧಪಕ್ಷದ ನಡವಳಿಕೆಯನ್ನು ಹೊಡೆಯುವುದು. ಬಡಿಯುವುದು, ಜೀಪಿಗೆ ಬೆಂಕಿ ಹಚ್ಚುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಯಾವಾಗ ಹಚ್ಚಿದರು ?

ಶ್ರೀ ಎಚ್. ಎಸ್. ಸಿದ್ದಪ್ಪ.—ಶ್ರೀಮಾನ್ ಹನುಮೇಗೌಡರ ಜೀಪಿಗೆ ಹಾಸನದಲ್ಲಿ ಯಾವುದೊ ಸಮಾರಂಭಕ್ಕೆ ಹೋದಾಗ

ಅಧ್ಯಕ್ಷರು.—ಮನಸ್ಸಿನಲ್ಲಿ ಏನೋ ನೆನೆಸಿಕೊಂಡು ಬಂದುಬಿಡುತ್ತೀರಿ. ಹೇಳುವಾಗ ಎಲ್ಲರಿಗೂ ಗೊತ್ತಾಗಿದೆ ಎಂದು ತಿಳಿದುಕೊಂಡು ಮಾತನಾಡುವ ಹಾಗೆ ಹೇಳುತ್ತೀರಿ.

ಶ್ರೀ ಎಚ್. ಎಸ್. ಸಿದ್ದಪ್ಪ.—ಇದು ಪತ್ರಿಕೆಯಲ್ಲಿ ಬಂದಿರುವ ವಿಷಯ, ಎಲ್ಲರಿಗೂ ಗೊತ್ತಿಲ್ಲದೆ ಹೋದರೂ ಶ್ರೀ ಸಿದ್ದವೀರಪ್ಪನವರಿಗೆ ಮತ್ತು ಚೆನ್ನಬಸಪ್ಪನವರಿಗೂ ಗೊತ್ತಿರುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ನಾವು ಇವರೊಳಗೆ ಸೇರಿದ್ದೇವೋ ? ಹೇಗೆ ?

ಶ್ರೀ ಎಚ್. ಎಸ್. ಸಿದ್ದಪ್ಪ.—ಪರಿಸ್ಥಿತಿ ಹೀಗಾದರೆ ಕಷ್ಟವಾಗುತ್ತದೆ. ನಿಮ್ಮ ಮನೆಯಲ್ಲಿ ನಮಗೆ ಒಂದು ಔಟ್ ಹೌಸ್ ಕೊಡಿ ಅಲ್ಲೇ ನಾವು ಇರುತ್ತೇವೆ. ಊರಿಗೆ ಹೋಗುವುದಿಲ್ಲ. ನಮ್ಮನ್ನು ಹೊಡಿಸದ ಹಾಗೆ ಬಡಿಸದ ಹಾಗೆ ಸರಿಯಾದ ವ್ಯವಸ್ಥೆ ಮಾಡಿಕೊಡಿ.

FACILITIES AT THE GENERAL HOSPITAL, ETC., AT BANGALORE.

ಶ್ರೀ ಕೋಣಂದೂರು ಲಿಂಗಪ್ಪ.—ಶಾಸಕರ ಸಂಬಂಧದ ವಿಷಯದಲ್ಲಿ ಬಂದು ಮಾತು ಹೇಳಬೇಕಾಗಿದೆ. ಶ್ರೀಮಾನ್ ಚೆನ್ನಬಸಪ್ಪನವರು ಇದ್ದಾರೆ. ಜನರಲ್ ಹಾಸ್ಪಿಟ್‌ನಲ್ಲಿ ಇರುವವರಿಗೆ ಅಲ್ಲಿಗೆ ಬೇಕಾದ ಸರಿಯಾದ ವ್ಯವಸ್ಥೆಮಾಡಿ. ಅಲ್ಲಿನ ಊಟದ ವ್ಯವಸ್ಥೆಯನ್ನು ಮಂತ್ರಿಗಳು ಬಂದು ಊಟಮಾಡಿ ನೋಡಿ. ಇದರ ಬಗ್ಗೆ ನಾನು ತಪ್ಪುಗೆ ಬರೆದುಕೊಟ್ಟಿದ್ದೇನೆ. ಅದಕ್ಕೆ ಉತ್ತರ ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿ ನಾವು ಊಟ ಮಾಡುವ ಹಾಗಿಲ್ಲ.

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್.—ಜನರಲ್ ಹಾಸ್ಪಿಟಲ್ ಅನಾಥಾಶ್ರಮವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಊಟ ಇದ್ದರೂ ಕೂಡ ಸಾಂಬಾರು ಅಲ್ಲಿ ತಿನ್ನುವುದಕ್ಕೆ ಆಗುವುದಿಲ್ಲ. ಅದಕ್ಕೆ ಸೋಡ ಹಾಕಿರುತ್ತಾರೆ. ಅದು ತಿನ್ನುವುದಕ್ಕೆ ಆಗುವುದಿಲ್ಲ. ಆದ್ದರಿಂದ ಊಟಕ್ಕೆ ಬೇರೆ ಕಡೆ ಹೋಗಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಶಾಸನ ಸಭೆ ನಡೆಯುದಿದ್ದಾಗ ಶಾಸಕರು ಬಂದರೆ ಫೋನು ಮಾಡಿದರೆ ಅಲ್ಲಿ ನಾಲ್ಕು ಆಣೆ ಚಾರ್ಜು ಮಾಡುತ್ತಾರೆ. ರೆಜಿಸ್ಟ್ರೇಚರ್ ಹೋಂ ನಲ್ಲಿ ಫೋನು ಚಾರ್ಜು ಮಾಡುವುದಿಲ್ಲ. ಅದರ ಬಗ್ಗೆ ಶೀಘ್ರವಾಗಿ ಒಂದು ನಿರ್ಧಾರಕ್ಕೆ ಬಂದು ಜನರಲ್ ಹಾಸ್ಪಿಟಲ್‌ನ್ನು ರೆಜಿಸ್ಟ್ರೇಚರ್‌ಗೆ ಕೊಡಿ. ಬೇಕಾದರೆ ನೀವು ಬಂದು ನೋಡಿ. ಅಲ್ಲಿ ಊಟಮಾಡಿ ನಾವು ಚಾರ್ಜು ಕೊಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಂತ್ರಿಗಳು ಬರುವುದಿಲ್ಲ, ಸ್ಪೀಕರ್‌ರವರು ಬರುವುದಿಲ್ಲ. ಸ್ಪೀಕರ್‌ರವರು ಅಲ್ಲಿ ಊಟಮಾಡಿದರೆ ಗೊತ್ತಾಗುತ್ತದೆ,

ಅಧ್ಯಕ್ಷರು.—ನಾನು ಮಧ್ಯಾಹ್ನ ಊಟ ಮಾಡುವುದಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅಧ್ಯಕ್ಷಣಿಯವರೇ, ಲೆಜಿಸ್ಲೇಚರ್ ಹೋಂ ತಮಗೆ ಸೇರಿದೆ. ಜನರಲ್ ಹಾಸ್ಪಲ್ ಲೆಜಿಸ್ಲೇಚರ್ ನಡೆಯುವ ಕಾಲದಲ್ಲಿ ತಮ್ಮ ವಶಕ್ಕೆ ಕೊಡುತ್ತೇವೆ. ಲೆಜಿಸ್ಲೇಚರ್ ಹೋಂ ಮತ್ತು ಜನರಲ್ ಹಾಸ್ಪಲ್ ಎರಡೂ ಕೂಡ ಲೆಜಿಸ್ಲೇಚರ್ ಸೆಕ್ರೆಟರಿಯೇಟ್ ಸ್ಪೀಕರ್‌ರವರ ಆಡಳಿತಕ್ಕೆ ಒಳಪಟ್ಟಿದ್ದು, ಈ ಮಧ್ಯೆ ಸ್ಪೀಕರ್‌ರವರು ಏನು ಮಾಡಿ ಎಂದು ಹೇಳುತ್ತಾರೆ ಅದನ್ನು ಮಾಡುವುದಕ್ಕೆ ನಾನು ಬದ್ಧ. ಇದು ಸ್ಪೀಕರ್‌ರವರಿಗೆ ಬಿಟ್ಟಿದ್ದು.

ಅಧ್ಯಕ್ಷರು.—ನಾವು ಮಂತ್ರಿಗಳಿಗೆ ಓಪನ್ನಾಗಿ ಹೇಳುವ ಸಂದರ್ಭ ಒದಗಿಸಿಬಿಟ್ಟಿರಿ. ಜನರಲ್ ಹಾಸ್ಪಲ್ ಲೆಜಿಸ್ಲೇಚರ್ ನಡೆಯುವ ಜೈಮಿನಲ್ಲಿ ನಮಗೆ ಕೊಡುತ್ತೇವೆಂದು ಮಂತ್ರಿಗಳು ಹೇಳಿದರು. ನಮ್ಮ ವಶಕ್ಕೆ ಕೊಡುವುದು ರೂಮುಗಳು ಅದಕ್ಕೆ ಫರ್ನಿಷ್ ಮಾಡಿ ಅಲಾಟ್‌ಮೆಂಟ್ ಮಾತ್ರ ನಾವು ಮಾಡುವುದು ಬಾಕೀದು ಎಲ್ಲಾ ಗವರ್ನ್‌ಮೆಂಟ್ ಮಾಡುತ್ತದೆ. ಆದರೆ ಲೆಜಿಸ್ಲೇಚರ್ಸ್ ಹೋಂ ನಲ್ಲಿ ಇರತಕ್ಕ ಕಷ್ಟ ತಾವು ತಿಳಿದುಕೊಳ್ಳಬೇಕು. ಬಹಳ ನೊಂದ ಹೃದಯದಿಂದ ಹೇಳುತ್ತೇನೆ. ಯಾವ ಮೆಂಬರೂ ಸರಿಯಾಗಿ ಕೋ ಆಪರೇಟ್ ಮಾಡುತ್ತಾ ಇಲ್ಲ. ಒಂದು ರೂಮನ್ನು ಒಬ್ಬ ಮೆಂಬರಿಗಾಗಿ ಕೊಟ್ಟರೆ ಅದರಲ್ಲಿ 10—12 ಜನ ಇರುವುದನ್ನು ನಾವು ಸಾಧಾರಣವಾಗಿ ನೋಡುತ್ತಿರುತ್ತೇವೆ. ಮೆಂಬರ್ಸ್ ಫೋನ್ ಉಪಯೋಗಿಸುವುದಕ್ಕಿಂತ ಜಾಸ್ತಿಯಾಗಿ ಅವರ ಅತಿಥಿಗಳು ಉಪಯೋಗಿಸುತ್ತಾರೆ ಎಂದು ನಮಗೆ ಗೊತ್ತಾಗುತ್ತಾ ಇದೆ. ಅದು ಅಲ್ಲದೆ ಆಳು ಕಾಳುಗಳನ್ನು ಉಪಯೋಗಿಸಿಕೊಳ್ಳುವ ರೀತಿ ಅಷ್ಟರಮಟ್ಟಿಗೆ ಸರಿಯಾಗಿಲ್ಲ ಎಂದು ಹೇಳಬೇಕಾಗಿದೆ. ಊಟದ ವಿಚಾರದಲ್ಲಿ ಹೇಳಬೇಕಾದರೆ ಇಷ್ಟು ಜನ ಅತಿಥಿಗಳನ್ನು ಕರೆದುಕೊಂಡು ಬರುತ್ತೇವೆ ಎಂದು ಮುಂಚಿತವಾಗಿ ಹೇಳಿದೆ ಏಕ್‌ದಮ್ ೫—6 ಜನರನ್ನು ಕರೆದುಕೊಂಡು ಹೋದರೆ ಹೇಗೆ ? ನಿಮ್ಮ ಮನೆಯಲ್ಲಿ ಹಾಗೆ ಕೇಳಿದರೆ ನಿಮ್ಮ ಹೆಣ್ಣುಮಕ್ಕಳು ಎಷ್ಟು ಕಷ್ಟಪಡಬೇಕು ? ಹೇಳದೆ ಕೇಳದೆ 10—12 ಜನರನ್ನು ಕರೆದುಕೊಂಡು ಬಂದರೆ ಬೇಳೆ ಹಾಕಿ ಸಾರು ಮಾಡಿದ್ದರೆ ಅದನ್ನು ಜಾಸ್ತಿ ಮಾಡಬೇಕಾದರೆ ನೀರು ಹಾಕಲೇ ಬೇಕಾಗುತ್ತದೆ. ಅಂತಹ ಸಾರು ಊಟ ಮಾಡಬೇಕಾದರೆ ಕಷ್ಟವಾಗುತ್ತದೆ, ನಿಜ. ದಯವಿಟ್ಟು ಮೆಂಬರ್ಸ್ ನರಿಯಾದ ರೀತಿಯಲ್ಲಿ ಕೋ ಆಪರೇಟ್ ಮಾಡಿದರೆ ವ್ಯವಸ್ಥೆ ಚೆನ್ನಾಗಿ ಮಾಡುವುದಕ್ಕೆ ಸಾಧ್ಯ. ದಯಮಾಡಿ ತಾವುಗಳು ಎಲ್ಲರೂ ನರಿಯಾಗಿ ಕೋ ಆಪರೇಟ್ ಮಾಡಿದರೆ ಚೆನ್ನಾಗಿರುತ್ತದೆ. ನಿಮ್ಮಗಳಿಗೆ ಸೌಕರ್ಯವಾಗುವುದೇ ನಮಗೆ ಬೇಕಾಗಿರುವುದು. ಇಲ್ಲಿ ಊಟಮಾಡಿ ನಿಮಗೆ ಗೊತ್ತಾಗುತ್ತದೆ, ನೀವು ಮನೆಯಲ್ಲಿ ಊಟಮಾಡುತ್ತೀರಿ ಎಂದು ನನ್ನ ಸೈಜ್ ನೋಡಿ ಹೇಳುತ್ತಾ ಇದ್ದೀರಿ. ಆದರೆ ನಾನು ಅಸೆಂಬ್ಲಿ ಕಾಲದಲ್ಲಿ ಊಟ ಮಾಡುವುದಿಲ್ಲ ಎಂದು ಹೇಳಿದರೂ ಅದು ಸುಳ್ಳು ಎಂದು ಭಾವಿಸಬಾರದು. ಏತಕ್ಕೆಂದರೆ ಮಧ್ಯಾಹ್ನ ಊಟ ಮಾಡಿದರೆ ನೀವು ಆವೇಶದ ಭರದಲ್ಲಿ ಹೇಳುವಾಗ ಕಣ್ಣು ಎಳೆದರೆ ಏನು ಗತಿ ಎಂದು ನಾನು ಊಟ ಮಾಡುವುದಿಲ್ಲ. ನಾನು ಇದನ್ನು ಲಘುವಾಗಿ ಹೇಳುತ್ತಾ ಇಲ್ಲ. ತಮ್ಮಗಳಿಗೆ ಸೌಕರ್ಯ ಒದಗಿಸಬೇಕು ಎನ್ನುವುದೇ ನನಗೆ ಮಹತ್ತರವಾದ ಆಸೆ. ತಾವುಗಳು ಕೋ ಆಪರೇಟ್ ಮಾಡಿದರೆ ನಿಜವಾಗಿ ಸರಿಯಾಗಿ ನಡೆಸಿಕೊಂಡು ಹೋಗುತ್ತಾರೆ. ಜನರಲ್ ಹಾಸ್ಪಲ್‌ನಲ್ಲಿ ನಮಗೆ ಸೇರಿದ್ದು ಫರ್ನಿಷ್ ಮಾಡುವುದು ಮಾತ್ರ, ಬಾಕಿ ವ್ಯವಹಾರ ಸರ್ಕಾರಕ್ಕೆ ಸೇರಿದ್ದು. ಸರ್ಕಾರ ಅಚ್ಚುಕಟ್ಟಾಗಿ ನಡೆಸಿದರೆ ನಮಗೆ ಬಹಳ ಸಂತೋಷ.

3-00 P. M.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಫರ್ನಿಷ್ ಮಾಡುವುದರಲ್ಲಿ ಜನರಲ್ ಹಾಸ್ಪಲಿಗೂ ಲೆಜಿಸ್ಲೇಚರ್ ಹೋಂಗೂ ವ್ಯತ್ಯಾಸವಿದೆ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂದಿರುವುದು ನನಗೆ ಸಂತೋಷವಾಗಿಲ್ಲ. ಲೇಜಿಸ್ಲೇಟರ್ಸ್‌ಗೆ ಇರುವ ಕಷ್ಟಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದು ಉಚಿತವಲ್ಲ. ಇದಕ್ಕೆ ಹಣ ಕಮಿಟಿ ಇವೆ, ಆ ಕಮಿಟಿಯಲ್ಲಿ ಇವರ ಕಷ್ಟ ಸುಖಗಳನ್ನು ಆಲೋಚನೆ ಮಾಡಬಹುದು. ಇದರ ಬಗ್ಗೆ ನಾನು ಒಂದು ನುಡಿ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅಧಿವೇಶನ ಇಲ್ಲದಿರುವ ಕಾಲದಲ್ಲಿ ಮೆಂಬರ್ಸ್‌ಗಳಿಗೆ ಲೆಜಿಸ್ಲೇಚರ್ ಹೋಂ ನಲ್ಲಿ, ಜನರಲ್ ಹಾಸ್ಪಲಿನಲ್ಲಿ ರೂಂ ಸಿಕ್ಕದೆ ಹೋಟೆಲಿನಲ್ಲಿ ಇರುವ ಪರಿಸ್ಥಿತಿ ಬಂದಿದೆ. ಲೆಜಿಸ್ಲೇಚರ್ ಹೋಂ ಅನ್ನು ಆಗಲಿ ಅಥವಾ ಜನರಲ್ ಹಾಸ್ಪಲ್‌ನ್ನಾಗಲೀ ಆದಾಯದ ಮೇಲೆ ನಡೆಸುವ ವ್ಯವಸ್ಥೆ ಬೇಡ. ಇದರಿಂದ ದೇಶಕ್ಕೆ

(ಶ್ರೀ. ಎಚ್. ಡಿ. ದೇವೇಗೌಡ)

ನಷ್ಟವಾಗುತ್ತದೆ. ಸರ್ಕಾರಕ್ಕೆ ಪೆಚ್ಚು ತುಂಬುವುದಕ್ಕೋಸ್ಕರ ಇದನ್ನು ಹೋಟಲ್ ಆಗಿ ಕನ್ವರ್ಟ್ ಮಾಡಿ ಯಾರು ಬೇಕಾದರೂ ಅಧಿಕಾರಿಗಳು ಬಂದು ಇಳಿದುಕೊಳ್ಳಬಹುದು. ಆದರೆ ಅಧಿಕಾರಿಗಳು ಬಂದು ಅಲ್ಲಿ ಇಳಿಮುಕೊಳ್ಳುವ ವ್ಯವಸ್ಥೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಿದರೆ ಒಳ್ಳೆಯದು. ನಾನು ಜನರಲ್ ಹಾಸ್ಪಲನಲ್ಲಿ ಒಂದು ರೂಮನ್ನು ಪರ್ಮನೆಂಟ್ ಆಗಿ ಇಟ್ಟುಕೊಂಡಿದ್ದೇನೆ. ಲೆಜಿಸ್ಲೇಟರ್ಸ್, ಲೆಜಿಸ್ಲೇಚರ್ಸ್ ಹೋಂ ನಲ್ಲಿ ರೂಮ್ ಸಿಕ್ಕದೆ, ಜನರಲ್ ಹಾಸ್ಪಲನಲ್ಲಿ ರೂಮ್ ಸಿಕ್ಕದೆ ರಾತ್ರಿ ಹನ್ನೆರಡು ಗಂಟೆಯಲ್ಲಿ ಹೊಟ್‌ಲನಲ್ಲಿ ಇರುವ ಸ್ಥಿತಿಬಂದು ನನ್ನ ರೂಮಿನಲ್ಲಿ ಮಲಗಿ ಕೊಂಡಿದ್ದಾರೆ. ಲೆಜಿಸ್ಲೇಟರ್ಸ್‌ಗೆ ಈ ಎರಡು ಕಡೆಯಲ್ಲಿ ಪ್ರಿಫರೆನ್ಸ್ ಇರಬೇಕು. ಹಿಂದೆ ವೈಕುಂಠ ಬಾಳಿಗಾ ಅವರ ಕಾಲದಲ್ಲಿ ಅಧಿವೇಶನ ಇಲ್ಲದಿರುವಾಗ, ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಮೀಟ್ ಮಾಡಲಕ್ಕೆ ಬೇರೆಯವರಿಗೆ ಕೊಡಬಹುದು ಎಂದು ನಿರ್ಣಯ ತೆಗೆದುಕೊಂಡರು. ಲೆಜಿಸ್ಲೇಚರ್ ಹೋಂ ನಲ್ಲಿ ಲೋಕಲ್ ಚಾರ್ಜಸ್, ಟೆಲಿಫೋನ್ ಚಾರ್ಜಸ್ ಅನ್ನು ಕಲೆಕ್ಟ್ ಮಾಡುವುದಿಲ್ಲ, ಜನರಲ್ ಹಾಸ್ಪಲನಲ್ಲಿ ಕರೆಕ್ಟ್ ಮಾಡುತ್ತಾರೆ. ನಾವಾದರೂ ಬೇರೆ ಕಡೆಗೆ ಫೋನ್ ಮಾಡುವುದಿಲ್ಲ; ಆಫೀಸರ್ಸ್‌ಗೆ ಫೋನ್ ಮಾಡುತ್ತೇವೆ, ಮತ್ತೊಬ್ಬರಿಗೆ ಫೋನ್ ಮಾಡುತ್ತೇವೆ. ನಾನು ಈ ಹತ್ತು ವರ್ಷಗಳಲ್ಲಿ ಲೆಜಿಸ್ಲೇಚರ್ ಹೋಂ ಬಾಡಿಗೆಯನ್ನು ಉಳಿಸಿಕೊಂಡಿಲ್ಲ, ಉಳಿಸಿಕೊಳ್ಳುವ ಪ್ರವೃತ್ತಿ ನನ್ನಲ್ಲಿ ಇರಲಿಲ್ಲ. ಈಗ ಭಂಡತನ ಮಾಡಿ ಲೋಕಲ್ ಚಾರ್ಜಸ್ ಅನ್ನು ಕಟ್ಟುತ್ತಾ ಇಲ್ಲ, ನಿಮ್ಮ ಸರ್ಕಾರ ಏನು ಮಾಡುತ್ತದೆ ನೋಡೋಣ ಎಂದು. ಕಳೆದ ಒಂದು ವರ್ಷದಿಂದ ಕೊಟ್ಟಿಲ್ಲ. ಗವರ್ನರ್ ರಜೀವ್‌ನಲ್ಲಿ ಕಟ್ಟಿಕೊಂಡು ಬಂದಿದ್ದೇನೆ. ಈ ದೃಷ್ಟಿಯಿಂದ ಸದಸ್ಯರು ಲೋಕಲ್ ಚಾರ್ಜಸ್ ಕಟ್ಟಿ ಬೇಕಾಗಿಲ್ಲ ಎಂದು ಗವರ್ನಮೆಂಟ್ ಆರ್ಡರ್‌ಅನ್ನು ಮಾಡಿಫೈ ಮಾಡುವುದು ಸೂಕ್ತ. ಸ್ಪೀಕರ್ ಅವರು ಸ್ಪಷ್ಟೀಕರಣ ಮಾಡಿದಹಾಗೆ, ಅಸೆಂಬ್ಲಿ ನಡೆಯುತಕ್ಕ ಕಾಲದಲ್ಲಿ ಜನರಲ್ ಹಾಸ್ಪಲ್ ಅನ್ನು ಅವರು ವಹಿಸಿಕೊಳ್ಳುತ್ತಾರೆ. ಕೆಲವು ಫರ್ನಿಚರ್ಸ್ ಅನ್ನು ಹಾಕಬೇಕು ಬಾಕಿ ವ್ಯವಸ್ಥೆ ಸರ್ಕಾರದ್ದು. ಕ್ಯಾಂಟೀನ್ ರನ್ ಮಾಡುವುದನ್ನು ಯಾವನಿಗೋ ಒಬ್ಬನಿಗೆ 90 ರೂಪಾಯಿ ಸಂಬಳ ಕೊಟ್ಟು ನಡೆಸುತ್ತಿದ್ದಾರೆ. ಅದನ್ನೆಲ್ಲಾ ಈ ಸಭೆಯಲ್ಲಿ ಚರ್ಚೆ ಮಾಡುವುದು ಬೇಡ. ಒಂದು ಸಾರಿ ಕಾಫಿಯಲ್ಲಿ ನೊಣ ಬಿದ್ದಿದ್ದರೆ, ತೆಗೆಯದೆ ಹಾಗೆ ತಂದುಕೊಟ್ಟರು. ಆಗ ಸಂಬಂಧಪಟ್ಟ ಸೂಪರ್‌ವೈಸರ್‌ಗೆ ತಿಳಿಸಿ ಹಾಗೆ ಮಾಡಬಾರದು ಎಂದು ಎಚ್ಚರಿಕೆ ಕೊಟ್ಟು, ನೊಣವನ್ನು ತೆಗೆದು ಹಾಕಿಯಾದರೂ ಕೊಡಿ ಎಂದು ಹೇಳಿದೆ. ಕಂಟ್ರಾಕ್ಟ್ ಕೊಟ್ಟರೆ ನಾವು ನಡೆಸುತ್ತೇವೆ ಎಂದು ಯಾರಾದರೂ ಮುಂದೆ ಬರುತ್ತಾರೆ. ಮಾನ್ಯ ಚೆನ್ನಬಸಪ್ಪನವರ ದಕ್ಷ ಆಡಳಿತದಲ್ಲಿ, ಅವರ ನೇತೃತ್ವದಲ್ಲಿ ಒಂದು ಸರಿಯಾದ, ವ್ಯವಸ್ಥಿತವಾದ ಕ್ಯಾಂಟೀನ್ ಆಗಲೆಲ್ಲ ಎಂದರೆ ಯೋಚನೆ ಮಾಡಿ.

† ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮಾನ್ಯ ಸದಸ್ಯರುಗಳಿಗೆ ಅನುಕೂಲಗಳು ಕಡಿಮೆ ಅನಾನುಕೂಲಗಳು ಹೆಚ್ಚುತ್ತಿವೆ ಎಂದು ಸದಸ್ಯರಿಂದ ನಾನಾ ರೀತಿಯಲ್ಲಿ ಈ ಸಭೆಯು ಮುಂದೆ ದೂರುಗಳು ಪದೆ ಪದೇ ಬರುತ್ತಿವೆ. ಸದಸ್ಯರುಗಳು ಈ ಜನರಲ್ ಹಾಸ್ಪಲ್ ಮತ್ತು ಲೆಜಿಸ್ಲೇಚರ್ ಹೋಂನಲ್ಲಿ ಒಂದು ವೇಳೆ ಒಂದೆರಡು ತಿಂಗಳು ಇರಬೇಕಾಗಿ ಬರುತ್ತದೆ, ಮಧ್ಯೆ ಮಧ್ಯೆ ಬರಬೇಕಾಗಿ ಬರುತ್ತದೆ. ಎಲ್ಲಾ ಕಾಲದಲ್ಲೂ ಕೂಡ ಸದಸ್ಯರ ಘನತೆ ಗೌರವ, ಗಾಂಭೀರ್ಯ ಇವುಗಳನ್ನು ಕಾಯಬೇಕಾದದ್ದು ಲೆಜಿಸ್ಲೇಚರ್ ಮತ್ತು ಸರ್ಕಾರದ ಕರ್ತವ್ಯ. ಇದರಲ್ಲಿ ನನ್ನ ಮಟ್ಟಿಗೆ ಹೇಳುವುದಾದರೆ, ಎರಡು ಕಡೆಯಿಂದ ಕಂಟ್ರೋಲ್ ಬೇಡ. ಯಾರಾದರೂ ಒಬ್ಬರ ಕೈಯಲ್ಲಿ ಇವುಗಳ ಆಡಳಿತ ಇರಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಲೆಜಿಸ್ಲೇಚರ್‌ಗೆ ಕೊಟ್ಟು ಬಿಡಿ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದಕ್ಕೆ ನನ್ನ ಅಡ್ಡಿ ಇಲ್ಲ; ಡ್ಯೂಯಲ್ ಕಂಟ್ರೋಲ್, ಡ್ಯೂಯಲ್ ಮ್ಯಾನೇಜ್‌ಮೆಂಟ್ ಇದ್ದರೆ ಯಾವತ್ತೂ ಕೂಡ ರೋಪ ದೋಷಗಳಿಗೆ ಅವಕಾಶ ಮಾಡಿ ಕೊಟ್ಟ ಹಾಗಾಗುತ್ತದೆ. ಆದ್ದರಿಂದ ನಾನೂ ಸ್ಪೀಕರ್ ಅವರು ಕರೆತು ಏನು ಏನು ಪರಿಸ್ಥಿತಿ ಇದೆ ಎನ್ನುವುದನ್ನು ಸಮಾಲೋಚನೆ ನಡೆಸಿದ ಮೇಲೆ ಸ್ಪೀಕರ್ ಅವರು ಯಾವ ರೀತಿ ಸೂಚನೆ ಕೊಡುತ್ತಾರೋ, ಆ ರೀತಿ ಸರ್ಕಾರ ತಮ್ಮಗಳ ಸೌಕರ್ಯಕ್ಕೆ ವ್ಯವಸ್ಥೆ ಮಾಡಿಕೊಡುವುದಕ್ಕೆ ಸರ್ಕಾರದ ವತಿಯಿಂದ ಹೇಳುವುದಾದರೆ ನಮ್ಮದು ಅಡ್ಡಿ ಇಲ್ಲ.

ಶ್ರೀ ಎ. ಎಂ. ಸೂರ್ಯನಾರಾಯಣಗೌಡ.—ಬೆಂಗಳೂರಿಗೆ ಬಂದಂಥ ಎಂ. ಎಲ್. ಎ. ಗಳಿಗೆ ಲೆಜಿಸ್ಲೇಚರ್ ಹೋಂ ನಲ್ಲಿ ಅನುಕೂಲಗಳನ್ನು ಕಲ್ಪಿಸಿದ್ದಾರೆ. ಅದೇ ರೀತಿಯಲ್ಲಿ ಜನರಲ್ ಹಾಸ್ಪಲ್‌ನಲ್ಲಿ ಇರುವಂಥ ಸದಸ್ಯರಿಗೆ ಫೋನ್ ಕಾರ್ ಒಂದೇ ಅಲ್ಲ, ಯಾರು ರೂಂ ಅನ್ನು

ಬಯಸುತ್ತಾರೋ ಅವರಿಗೆ ರೂಂ ಕೂಡ ಸಿಕ್ಕುವುದಿಲ್ಲ. ಆದ್ದರಿಂದ ಸ್ಪೀಕರ್ ಅವರು ಇದನ್ನು ಲೆಜಿಸ್ಲೇಚರ್ ವಿಂಗಿಗೆ ತೆಗೆದುಕೊಂಡರೆ ಸದಸ್ಯರಿಗೆ ಅನುಕೂಲಗಳನ್ನು ಕಲ್ಪಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ವಿಶ್ವನಾಥ ರೆಡ್ಡಿ.— ಈಗ ಲೆಜಿಸ್ಲೇಚರ್ ಹೋಂ ನಲ್ಲಿ ಏನು ವ್ಯವಸ್ಥೆ ಇದೆ ಅದರ ಬಗ್ಗೆ ಪ್ರಸ್ತಾಪ ಇಡೆದಿದೆ. ಇದರ ಬಗ್ಗೆ ತಾವು ಮಾನ್ಯ ಚೆನ್ನಬಸಪ್ಪನವರು ಕೂತು ಮಾತನಾಡಿ ಒಂದು ನಿರ್ಧಾರಕ್ಕೆ ಬರಬೇಕು. ಅಲ್ಲಿ ಲೆಜಿಸ್ಲೇಚರ್ಸ್‌ಗೆ ಸಾಕಷ್ಟು ಸೌಕರ್ಯ ಸಿಗುತ್ತಾ ಇಲ್ಲ ಎನ್ನುವ ಭಾವನೆಯನ್ನು ಸದಸ್ಯರುಗಳು ವ್ಯಕ್ತಪಡಿಸಿದ್ದಾರೆ. ಜೊತೆಗೆ ಸದಸ್ಯರುಗಳಿಂದಲೂ ತೊಂದರೆಗಳು ಇವೆ, ನಮ್ಮ ಕಡೆಯವರು ದೂರದಿಂದ ಇಲ್ಲಗೆ ಬರುತ್ತಾರೆ ಅವರಿಗೆ ಊಟದ ವ್ಯವಸ್ಥೆ ಇರುವ ವ್ಯವಸ್ಥೆ ನಾವೇ ಮಾಡಬೇಕಾಗುತ್ತದೆ. ಎಷ್ಟೋಸಾರಿ ಲೆಜಿಸ್ಲೇಚರ್ ಕೋಂ ನಲ್ಲಿ, ಮತ್ತು ಜನರಲ್ ಹಾಸ್ಪಲಿನಲ್ಲಿ ರೂಮು ಸಿಕ್ಕದೆ ಮೂಕ್ಕಾಲುಭಾಗ ಹೋಟೆಲುಗಳಲ್ಲಿ ಇದ್ದಾರೆ. ದಯವಿಟ್ಟು ಎಲ್ಲಿ ಲೆಜಿಸ್ಲೇಚರ್ಸ್ ಇರುತ್ತಾರೋ ಅವರ ಜೊತೆಯಲ್ಲಿ ನಮ್ಮ ಕಡೆಯಿಂದ ಬರುವ ವರಿಗೂ ವ್ಯವಸ್ಥೆ ಮಾಡಬೇಕು. ಪರ್ಮನೆಂಟ್ ಆದ ವ್ಯವಸ್ಥೆ ಆಗಬೇಕು. ಹೈದರಾಬಾದ್ ಲೆಜಿಸ್ಲೇಚರ್‌ನಲ್ಲಿ 1952-57 ರಲ್ಲಿ ನಮ್ಮ ಆಪ್ತರು ಒಬ್ಬರು ಇದ್ದರು ಅವರಿಗೆ ಪರ್ಮನೆಂಟ್ ಆಗಿ ಒಂದು ಕ್ವಾರ್ಟರ್ಸ್ ಕೊಟ್ಟಿದ್ದರು. ಆ ರೀತಿ ಪರ್ಮನೆಂಟ್ ಆಗಿ ಕ್ವಾರ್ಟರ್ಸ್ ಕೊಟ್ಟರೆ ಯಾವ ತರಹ ತಕರಾರು ಬರುವುದಿಲ್ಲ. ಅಂಥ ವ್ಯವಸ್ಥೆ ಆಗಬೇಕು. ಮುಂದಿನ ಅಧಿವೇಶನದ ಹೊತ್ತಿಗೆ ಪ್ರತಿಯೊಬ್ಬರಿಗೂ ಫ್ಯಾಮಿಲಿ ಕ್ವಾರ್ಟರ್ಸ್‌ಗೆ ಅವಕಾಶ ಮಾಡಿಕೊಡಬೇಕು. ಅವರು ಅಡಿಗೆ ಮಾಡಿ ಕೊಳ್ಳುವುದಕ್ಕೂ, ಇರುವುದಕ್ಕೂ, ಈ ಎಲ್ಲಾ ದೃಷ್ಟಿಯಿಂದ, ಫ್ಯಾಮಿಲಿ ಕ್ವಾರ್ಟರ್ಸ್ ಸಾಧ್ಯವಾಗದಿದ್ದರೆ ಒಂದು ಪ್ರತ್ಯೇಕ ರೂಮು ಅದರೂ ಆಗಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಹೆಣ್ಣು ಮಕ್ಕಳಿಗೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ಅದಕ್ಕೂ ಹೊಟ್ಟೆಕಿಚ್ಚೆ.

ಶ್ರೀ ಟಿ. ಎಂ. ಮುಂಜುನಾಥ್.—ನಾನು ಅಲ್ಲಿ ಒಂದು ದಿವಸವೂ ಊಟಕ್ಕೆ ಹೋಗಿಲ್ಲ. ಸದಸ್ಯರಿಗೆ ಅಡಿಗೆ ಮಾಡಿಕೊಳ್ಳುವುದಕ್ಕೆ ರೂಮು ಇಲ್ಲ, ನಾವು ಗಂಡಸರು ಏನು ಮಾಡುವುದು ? ನಮಗೆ ಹೊಟ್ಟೆತುಂಬ ಊಟ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎಚ್. ಸಿದ್ದವೀರಪ್ಪ.—ಅವರು ಅಡಿಗೆ ಮಾಡಿಕೊಳ್ಳುವುದಾದರೆ ಒಂದು ರೂಮು ಕೊಡಿ.

† ಶ್ರೀ ವಿಶ್ವನಾಥ ರೆಡ್ಡಿ.—ಮುಂದಿನ ಅಧಿವೇಶನದೊಳಗೆ ಮಾನ್ಯ ಚೆನ್ನಬಸಪ್ಪನವರು ಮನಸ್ಸು ಮಾಡಿದರೆ, ಕ್ವಾರ್ಟರ್ಸ್‌ಗಳನ್ನು ಮಾಡಬಹುದು. ಫ್ಯಾಮಿಲಿ ಕ್ವಾರ್ಟರ್ಸ್ ಯಾರಿಗೆ ಬೇಕು ಅವರಿಗೆ ನಿರ್ದಿಷ್ಟವಾಗಿ ತಿಂಗಳಿಗೆ ಇಷ್ಟು ಎಂದು ನಿಗದಿ ಮಾಡಿ. ಹಾಗೆ ಮಾಡಿದರೆ ಉಚಿತವಾಗುತ್ತದೆ ಎಂದು ನಾನು ತಿಳಿದಿದ್ದೇನೆ.

ಎರಡನೆಯದಾಗಿ ಲೆಜಿಸ್ಲೇಟರ್ಸ್ ಹೋಂ ಬಗ್ಗೆ ಹೇಳಬೇಕಾದರೆ ಅಲ್ಲಿರುವ ಸಿಬ್ಬಂದಿಯ ವರ್ತನೆ ಸರಿಯಾಗಿಲ್ಲ. ಇದು ಶೋಚನೀಯ. ಬಹಳಷ್ಟು ಜನ ಸಿಬ್ಬಂದಿ ವರ್ಗದವರು ಸರಿಯಾಗಿ ವರ್ತಿಸುತ್ತಿಲ್ಲ. ಸದಸ್ಯರು ಸಭೆಗೆ ಬಂದು ರುಜು ಮಾಡಲು ಹೋದಾಗ ಅಲ್ಲಿರುವ ಕ್ಲಾರ್ಕ್ ಮತ್ತು ಪ್ಯೂನ್ ಕುರ್ಚಿ ಮೇಲೆ ಕಾಲಮೇಲೆ ಕಾಲು ಹಾಕಿಕೊಂಡು ಕುಳಿತಿರುತ್ತಾರೆ. ಇಂಥ ವರ್ತನೆಯನ್ನು ನಾವು ಸಹಿಸುವುದಕ್ಕೆ ಸಾಧ್ಯವಿಲ್ಲ. ಸದಸ್ಯರು ಬಂದಾಗ ಸಿಬ್ಬಂದಿ ವರ್ಗ ಹೇಗೆ ವರ್ತಿಸಬೇಕು ಎನ್ನುವುದನ್ನು ಸಿಬ್ಬಂದಿಗೆ ಕಲಿಸಿಕೊಡಬೇಕಾದ್ದು ಮುಖ್ಯ.

ಲೆಜಿಸ್ಲೇಟರ್ಸ್ ಹೋಂಗೆ ಫೋನ್ ಮಾಡಿದಾಗ ಐದು ಹತ್ತು ನಿಮಿಷ ಫೋನ್ ಹಿಡಿದು ಕೊಂಡಿದ್ದರೂ ರೆಸ್ಪಾನ್ಸ್ ಸಿಕ್ಕುವುದಿಲ್ಲ. ಏನು, ಎಲ್ಲಿ, ಯಾರು ಎಂದು ಕೇಳುತ್ತಾರೆ. ಪ್ಲೀಸ್ ಎಂದು ಸಹ ಹೇಳುವುದಿಲ್ಲ. ಇಪ್ಪು ಒರಟಾಗಿ ಮಾತನಾಡುತ್ತಾರೆ. ಇದನ್ನು ನಾನು ಹತ್ತಾರು ಸಲ ಕಂಡಿದ್ದೇನೆ. ಆಫೀಸರ್‌ಗಳು ಮನಬಂದಂತೆ ಮಾತನಾಡುವುದನ್ನು ಕೇಳಿದ್ದೇನೆ. ಟೆಲಿಫೋನ್ ಎತ್ತಿದಾಗ ನಾವೆಲ್ಲಾರು ಸಾರಿ ಇಂಥವರು ಎಂದು ಹೇಳಬೇಕಾಗುತ್ತದೆ. ಸದಸ್ಯರಲ್ಲದೆ ಯಾರಾದರೂ ಮಾತನಾಡಿದರೆ ಫೋನ್ ಕೊಡಬೇಡಿ ಎನ್ನುವ ಆದೇಶ ಆಫೀಸಿನಿಂದ ಹೋಗಿರಬಹುದು. ಆದರೆ ಅದಕ್ಕೆ ನನ್ನ ಒಂದು ಸಲಹೆ ಏನೆಂದರೆ ವಿಧಾನ ಸಭೆ ನಡೆಯುವ ಕಾಲದಲ್ಲಾ ಎಷ್ಟೋ ವೇಳೆ ನಮ್ಮ ಪರವಾಗಿ ಬೇರೆಯವರನ್ನು ಮಾತನಾಡಲು ಹೇಳಬೇಕಾಗಿ ಬರುತ್ತದೆ. ಪ್ರತಿ ಸಲವೂ ನಾವೇ ಫೋನ್ ಎತ್ತಿ ಮಾತನಾಡಿ ಕನೆಕ್ಷನ್ ಪಡೆಯಬೇಕಾದರೆ ಹತ್ತು ನಿಮಿಷ ಬೇಕು. ಮೊನ್ನೆ ಯಾರು ಮಾತನಾಡುತ್ತಿದ್ದೀರಿ ಎಂದು ಕೇಳಿದಾಗ ನಾನು ಮಾತನಾಡುತ್ತಿದ್ದೇನೆಂದು

(ಶ್ರೀ ವಿಶ್ವನಾಥರೆಡ್ಡಿ)

ತಿಳಿಸಿದ ಮೇಲೆ ಫೋನ್ ಕೊಟ್ಟರು. ಆದ್ದರಿಂದ ಈ ತರಹ ಆದೇಶಗಳನ್ನು ಕೊಡಬಾರದು. ಅಸೆಂಬ್ಲಿ ನಡೆಯುವ ಕಾಲದಲ್ಲಿ, ಸದಸ್ಯರು ಲೆಜಿಸ್ಲೇಟರ್ಸ್ ಹೋಂನಲ್ಲಿ ಇವ್ವಾಗ ಯಾರು ಬೇಕಾದರೂ ಅವರ ಕಡೆಯಿಂದ ಮಾತನಾಡಲಿ ಅದಕ್ಕೆ ಅವಕಾಶ ಕೊಡಬೇಕು. ಪ್ರತಿ ಸಲವೂ ಸದಸ್ಯರೇ ತಾವು ಇರುವ ಕಡೆಯಿಂದ ಫೋನ್ ಬಳಿಗೆ ಹೋಗಿ ಮಾತನಾಡುವುದಕ್ಕೆ ತೊಂದರೆ ಯಾಗುತ್ತದೆ. ಅಲ್ಲದೆ ಅಲ್ಲಿರುವ ಟೆಲಿಫೋನ್ ಎಕ್ಸ್‌ಛೇಂಜ್ ಸರಿಯಾಗಿಲ್ಲ, ಸರಿಯಾಗಿ ಕೇಳಿಸುವುದಿಲ್ಲ. ಹೋದಸಾರಿ 19 7ರಲ್ಲಿ ನಾನು ಸದಸ್ಯನಾಗಿದ್ದಾಗ ನಾನು ಖಾಯಂ ಆಗಿ ರೂಮ್ ಇಟ್ಟು ಕೊಂಡಿದ್ದೆ. ಆಗ ಒಬ್ಬ ಬಾಯ್‌ಗೆ ರೂಮ್ ತೆಗೆದಿಡು ಎಂದು ಹೇಳಿದಾಗ ಅವನು ನನ್ನ ಪಲ್ಲಂಗದ ಮೇಲೆ ಮಲಗಿಕೊಂಡಿದ್ದ. ಅದನ್ನು ನೋಡಿ ನನಗೆ ಸಹಿಸುವುದಕ್ಕಾಗದೆ ಆ ಹುಡುಗನನ್ನು ಹೊಡೆದೆ. ಈ ರೀತಿಯ ಸಂದರ್ಭಗಳಲ್ಲಿ ನಾವು ಸಹಿಸಿಕೊಳ್ಳಲು ಆಗದೆ ಹೊಡೆಯುವ ಪ್ರಸಂಗ ಬರುತ್ತದೆ. ಆದರೂ ನಾವು ಸ್ಯೆರಿಸುತ್ತಿದ್ದೇವೆ. ಒಮ್ಮೊಮ್ಮೆ ನಮ್ಮ ಪ್ರೆಸ್ಟೀಜಿಗೆ ಧಕ್ಕೆ ಬಂದರೆ ಸದಸ್ಯತನವನ್ನೂ ಲೆಕ್ಕಿಸುವುದಿಲ್ಲ. ಅಧ್ಯಕ್ಷರಲ್ಲಿ ಮತ್ತು ಅವರ ಮೂಲಕ ಸಂಬಂಧಪಟ್ಟ ಅಧಿಕಾರಿ ಗಳಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ಕೆಲಸ ಮಾಡುವ ಸಿಬ್ಬಂದಿಗೆ ಮೊದಲು ಒಳ್ಳೆಯ ರೀತಿಯಿಂದ ವರ್ತನೆ ಮಾಡುವುದನ್ನು ಕಲಿಸಬೇಕು. ಇದು ಅತಿ ಪ್ರಾಮುಖ್ಯವಾದುದು.

ನಮಗೆ ಸಾಕಷ್ಟು ಸೌಕರ್ಯಗಳನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಸದಸ್ಯರು ಸಹಕಾರ ಮಾಡಬೇಕೆಂಬ ವಿಚಾರದಲ್ಲಿ ನಾವು ಖಂಡಿತ ವಾಗಿ ಸಹಕಾರ ಕೊಡುವುದಕ್ಕೆ ತಯಾರಾಗಿದ್ದೇವೆ. ನಾನು ಒಂದು ವಿಷಯವನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಲೆಜಿಸ್ಲೇಟರ್ ಹೋಂನಲ್ಲಿರುವ ಕಾರ್ಯಗಳ ಡ್ರೈವರ್‌ಗಳು ನನ್ನ ಬಗ್ಗೆ ಯಾವರೀತಿಯಲ್ಲಿ ನಡೆದುಕೊಂಡಿದ್ದಾರೆ ಎನ್ನುವುದನ್ನು ನಾನು ಬರವಣಿಗೆಯಲ್ಲಿ ಕೊಟ್ಟಿದ್ದೇನೆ. ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದು ಗೊತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ಯಾರಿಗೆ ಹೆಚ್ಚು ಬಲವಿದೆ, ಸಮಯ ಬಂದರೆ ಯಾರು ನಾಲ್ಕು ಪಟು ಕೊಡುವುದಕ್ಕೆ ಸಿದ್ಧವಾಗಿರು ತ್ತಾರೆ ಅಂಥವರಿಗೆ ಒಳ್ಳೆಯ ಗೌರವ ಮತ್ತು ಪುರಸ್ಕಾರ, ಮರ್ಯಾದೆ ಸಿಕ್ಕುತ್ತದೆ ಆ ಮಟ್ಟಕ್ಕೆ ಇಳಿಯಬಾರದು ಎನ್ನುವಂಥ, ನಮ್ಮಂಥವರಿಗೆ ಖಂಡಿತವಾಗಿ ಉಳಿಗಾಲವಿಲ್ಲ.

ಇಲ್ಲಿನ ಲಾಂಜಿನಲ್ಲಿ ಕ್ಯಾಂಟೀನ್ ವ್ಯವಸ್ಥೆ ಇದೆ. ಕಾಫಿ ಕೊಡಲು ಕೇಳಿದರೆ, ಸ್ವಲ್ಪ ಕೂಡ್ಲಿ ಡಿಕಾಷನ್ ತರುವುದಕ್ಕೆ ಹೋಗಿದ್ದಾರೆಂದು ಹೇಳುತ್ತಾರೆ. ಒಂದೊಂದು ಸಲ ಕಾಫಿಯನ್ನು ಕುಡಿಯುವುದಕ್ಕೂ ಆಗುವುದಿಲ್ಲ. ಇಂಥ ತೊಂದರೆಗಳಿರುತ್ತವೆ. ಆದ್ದರಿಂದ ಲಾಂಜಿನಲ್ಲಿರುವ ಕ್ಯಾಂಟೀನ್ ವ್ಯವಸ್ಥೆಯನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ.

Clarification about refering the Mysore Land Reforms (Amendment) Bill to the Joint Select Committee

ಶ್ರೀ ಎಚ್. ಡಿ. ದೇವೇಗೌಡ —ಭೂಸುಧಾರಣಾ ತಿದ್ದುಪಡಿ ಮಸೂದೆಯನ್ನು ಚರ್ಚೆ ಮಾಡುವುದಕ್ಕೆ ಮುಂಚೆ, ಒಂದು ಮಾತು ಹೇಳುತ್ತೇನೆ. ಸರ್ಕಾರ ಇದರ ಬಗ್ಗೆ ಏನು ನಿರ್ದಿಷ್ಟ ವಾದ ನಿಲುವನ್ನು ತಾಳಿದೆ ಎನ್ನುವುದು ಗೊತ್ತಾಗಲಿಲ್ಲ. ನಾನು ಮೊನ್ನೆಯ ದಿವಸ ಪ್ರಸ್ತಾಪ ಮಾಡಿದಾಗ ಮುಖ್ಯಮಂತ್ರಿಗಳು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಕಳುಹಿಸುತ್ತೇವೆ ಅಥವಾ ಇಲ್ಲ ಎನ್ನುವ ಬಗ್ಗೆ ನಾಳೆ ಹೇಳುತ್ತೇನೆಂದು ತಿಳಿಸಿದರು. ಈ ಹೊತ್ತು ಬುಧವಾರ ಇದರ ಬಗ್ಗೆ ನಿಖರವಾಗಿ ಸರ್ಕಾರದ ಅಭಿಪ್ರಾಯವೇನು ಎನ್ನುವುದನ್ನು ನಮಗೆ ತಿಳಿಸಬೇಕು. 1961 ರಿಂದಲೂ ನಾವು ಚರ್ಚೆಯನ್ನು ನಡೆಸಿಕೊಂಡು ಬಂದಿದ್ದೇವೆ. ಈ ಮಸೂದೆಯ ಬಗ್ಗೆ ಎಷ್ಟು ಕಾಲ ಚರ್ಚೆ ನಡೆಯುತ್ತದೆ, ಸದಸ್ಯರು ಕೊಟ್ಟ ತಿದ್ದುಪಡಿಗಳನ್ನು ಪರಿಶೀಲನೆ ಮಾಡುವುದಕ್ಕೆ ಎಷ್ಟು ದಿವಸ ಅವಕಾಶ ಮಾಡಿ ಕೊಡುತ್ತಾರೆ ಎನ್ನುವುದರ ಬಗ್ಗೆ ನಿರ್ದಿಷ್ಟವಾಗಿ ತೀರ್ಮಾನವಾಗಬೇಕು. ಅನಿಶ್ಚಿತ ವಾತಾವರಣದಲ್ಲಿ ನಾವು ಈ ಮಸೂದೆಯನ್ನು ಚರ್ಚೆ ಮಾಡುವುದಕ್ಕೆ ತಯಾರಾಗಿಲ್ಲ. ದಯವಿಟ್ಟು ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟೀಕರಿಸಬೇಕು. ಇಲ್ಲದೆ ಇದ್ದರೆ

ನಭೆಯ ಕಾರ್ಯಕಲಾಪಗಳನ್ನು ಮುಂದುವರಿಸುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಈಗ ಚರ್ಚೆ ಮುಂದುವರಿಯಲಿ. ಈ ವಿಚಾರದ ಬಗ್ಗೆ ನಾನು ಮುಖ್ಯಮಂತ್ರಿಗಳ ಹತ್ತಿರ ಮಾತನಾಡುತ್ತೇನೆ.

Mysore Land Reforms (Amendment) Bill, 1972

Motion to Consider

(Debate Continued)

ಶ್ರೀ ಕೆ. ಎನ್. ವೀರಪ್ಪಗೌಡ (ಶ್ಯಾಗೇರಿ).—ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಮಾತನ್ನಾಡುತ್ತ ಆಹಾರಧಾನ್ಯಗಳ ಕೊರತೆ ಯಾವ ಕಾರಣದಿಂದ ಪ್ರಾರಂಭವಾಗಿದೆ ಎಂದು ಹೇಳುವುದರಲ್ಲಿ ನಿಂತಿದ್ದೆ. ಈ ಹೊತ್ತು ಅದನ್ನು ಮುಂದುವರಿಸುವುದಕ್ಕೆ ಮೊದಲು ಕೆಲವರಿಗೆ ಭೂಮಿತಿಯ ವಿಷಯದಲ್ಲಿ ನಾನು ಯಾವ ಅಭಿಪ್ರಾಯದಲ್ಲಿದ್ದೇನೆ ಎನ್ನುವುದರ ಬಗ್ಗೆ ಖಚಿತವಾಗಿ ತಿಳಿದುಕೊಂಡಿಲ್ಲ ಎನ್ನುವ ಅನುಮಾನ ಬಂದಿರುವುದರಿಂದ ಅದರ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ಪಂಜಾಬ್, ಹರಿಯಾಣ, ಪಶ್ಚಿಮ ಬಂಗಾಳ ಇಂಥ ಒಳ್ಳೆಯ ಜಮೀನು ಇರತಕ್ಕ ರಾಜ್ಯಗಳಲ್ಲಿ 18 ಎಕರೆ ಮಿತಿಯನ್ನು ಈಗಾಗಲೇ ಗೊತ್ತು ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ನಾನು ಲೆಕ್ಕ ಹಾಕಿದಾಗ ಮೈಸೂರಿನಲ್ಲಿ ಅದಕ್ಕಿಂತಲೂ ಕಡಿಮೆ ಮಾಡಬೇಕಾಗಿತ್ತು. ಆದರೆ 18 ಎಕರೆಗೆ ಮೇಲೆ ಹೋಗತಕ್ಕ ಅವಕಾಶವಿಲ್ಲದೇ ಇರುವುದರಿಂದ ಈ ಹೊತ್ತು ನಾನು ಹೇಳುವುದು 18 ಎಕರೆಯಷ್ಟು ಎರಡು ಬೆಳೆ ಬರತಕ್ಕ ಜಮೀನು ಇರಬೇಕು ಮತ್ತು 50 ರಿಂದ 100 ಎಕರೆವರೆಗೆ ಖುಷ್ಕಿ ಜಮೀನಿರಬೇಕಾಗುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡತ್ತೇನೆ. ಆದರೆ ನಾನು ನಿನ್ನೆ ಹೇಳಿದ ಹಾಗೆ ಇದರ ಬಗ್ಗೆ ಪಕ್ಷವಾಲ್ಲಿ ಏನು ತೀರ್ಮಾನವಾಗುತ್ತದೆ ಅದಕ್ಕೆ ತಕ್ಕಬಾಗುತ್ತೇನೆ. ಈ ಕಾರಣದಿಂದ ಈ ಹೊತ್ತು ಈ ದೇಶದ ರೈತರು ಹಳ್ಳಿಯ ಮಟ್ಟದಲ್ಲಿ ಜೀವನ ನಡೆಸುವುದಕ್ಕೆ ಇಷ್ಟು ಬಹಳ ಅಗತ್ಯವೆಂದು ಒತ್ತಾಯಮಾಡಿ ಹೇಳುತ್ತೇನೆ. ಮಾನ್ಯ ಎಸ್. ಎಸ್. ಪಿ. ಯವರು ಕೆಲವು ವಿಷಯಗಳನ್ನು ಅಚ್ಚು ಹಾಕಿ ನಮ್ಮ ಕೈಗೆ ಕೊಟ್ಟಿದ್ದಾರೆ. ಅದರಲ್ಲಿ ಅನೇಕ ವಿಷಯಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಕೂಡ ನಾನು ಮಾತನಾಡಬೇಕಾಗಿ ಬರುತ್ತದೆ.

[MR. DEPUTY SPEAKER in the Chair]

ಶ್ರೀ ಕಾಗೋಡು ತಿಮ್ಮಪ್ಪನವರು.—ಮೊದಲು ಒಂದು ಕಡೆ ಹೇಳಿದ್ದಾರೆ. ಒಂದು ಎಕರೆಗೆ 600 ರೂಪಾಯಿಗಿಂತ ಜಾಸ್ತಿ ಉತ್ಪತ್ತಿ ಬರುವುದಿಲ್ಲವಾದ್ದರಿಂದ ಗೇಣಿದಾರನಿಂದ ಜಮೀನು ಬಿಡಿಸಿಕೊಳ್ಳುವ ಮಟ್ಟ ಜಾಸ್ತಿ ಇಡಬೇಕು ಎಂದು ಹೇಳಿದ್ದಾರೆ. ಇನ್ನೊಂದು ಕಡೆ ಫ್ಯಾಮಿಲಿ ಹೋಲ್ಡಿಂಗ್, ಬೇಸಿಕ್ ಹೋಲ್ಡಿಂಗ್, ಕಡಿಮೆ ಮಾಡುತ್ತೇವೆ ಎಂದು ಹೇಳುತ್ತಾರೆ. ಅವರು ಮಾತನಾಡುವಾಗ ಕೆಲವು ಸಂದರ್ಭಗಳಲ್ಲಿ ನಕ್ಸಲ್‌ಬಾರಿಗಳು ಕೇಳುವ ರೀತಿಯಲ್ಲಿ ಹೇಳಿದ್ದಾರೆ. ನಕ್ಸಲ್‌ಬಾರಿಗಳು ಹೆಚ್ಚಾಗಿ ಕಲ್ಕತ್ತಾ ಮುಂತಾದ ದೊಡ್ಡ ದೊಡ್ಡ ಸಿಟಿಗಳಲ್ಲಿ ಇದ್ದಾರೆ. ಅವು ಸಿಟಿ ಏರಿಯಾದಲ್ಲಿರುವವರ ಬಗ್ಗೆ ಪ್ರಸ್ತಾಪ ಮಾಡಲಿಲ್ಲಾ. ಇನ್ನೊಂದು ಕಡೆ ಅವರು ಹೇಳುತ್ತಾರೆ ಕೈಯ್ಯಲ್ಲಿ ನೇಗಿಲ ಮೇಣಿ ಹಿಡದೇ ಇದ್ದವರಿಗೆ ಜಮೀನು ಏತಕ್ಕೆ ಎಂದು. ಈ ಜಮೀನಿನ ವ್ಯವಸಾಯದ ಬಗ್ಗೆ ಅವರಿಗೆ ಪೂರ್ತಿ ಗೊತ್ತಿದೆಯೇ ಇಲ್ಲವೊ ಗೊತ್ತಿಲ್ಲ. ಯಾವ ಗೇಣಿದಾರರೂ ಆಗಲಿ ಕೂಲಿ ಜನರನ್ನು ಇಟ್ಟುಕೊಂಡು ಕೆಲಸ ಮಾಡುತ್ತಾರೆ ಎನ್ನುವುದು ಅವರಿಗೆ ಗೊತ್ತಿಲ್ಲ. ಕೂಲಿ ಜನರನ್ನು ಇಟ್ಟುಕೊಂಡೇ ವ್ಯವಸಾಯ ಮಾಡಬೇಕು. ಬಾಯಿನಲ್ಲಿ ಬೇಕಾದ ಹಾಗೆ ಮಾತನಾಡಬಹುದು, ಕಾರ್ಯತಃ ಮಾಡಬೇಕಾದರೆ ಕಷ್ಟ ಇದೆ. ನಾವು ನಿಜವನ್ನೇ ಹೇಳಬೇಕೆಂದು ಇಲ್ಲಿ ಪ್ರಮಾಣವಚನವನ್ನು ಸ್ವೀಕರಿಸಿದ್ದೇವೆ. ಆದುದರಿಂದ ನಾನು ಇಲ್ಲಿ ನಿಜವಾದ ವಿಷಯವನ್ನೇ ಪ್ರಸ್ತಾಪ ಮಾಡಬೇಕಾಗುತ್ತದೆ. ಶ್ರೀಮಾನ್ ಕಾಗೋಡುತಿಮ್ಮಪ್ಪನವರು ಕೃಷಿಗಾರರು ಹೌದೋ ಅಲ್ಲವೋ ಅನ್ನುವುದನ್ನು ನಾನು ಒಪ್ಪಿಕೊಳ್ಳಬೇಕಾಗಿಲ್ಲ. ಅವರ ತಂದೆ ಕೃಷಿಗಾರರು. ಈಪೊತ್ತು ನಮ್ಮ ಹಳ್ಳಿಗಳಲ್ಲಿ ಕೃಷಿಗಾರರು ಏನು ಮಾಡುತ್ತಾರೆ ಎಂದರೆ ತಮ್ಮ ಮಕ್ಕಳು 6 ವರ್ಷ ಆಗುತ್ತಾ ಇದ್ದಹಾಗೇನೇ ಗಂಟಿ ಕಾಯುವುದಕ್ಕೆ ಹಾಕಿಕೊಳ್ಳುತ್ತಾರೆ, ನಂತರ 12 ವರ್ಷ ಆಗುತಾ